**ವಿಶೇಷ ನ್ಯಾಯಾಲಯ, (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದಿಂದ ರಕ್ಷಣಾ ನ್ಯಾಯಾಲಯ) ಮತ್ತು (ಎಸ್.ಸಿ/ಎಸ್.ಟಿ. ಜನರ ಮೇಲಿನ ದೌರ್ಜನ್ಯ ತಡೆಗಟ್ಟುವ ನ್ಯಾಯಾಲಯ) ಮತ್ತು 3ನೇ ಅಧಿಕ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಲಯ, ಬೆಳಗಾವಿ.**

ಉಪಸ್ಥಿತರು

ಶ್ರೀಯುತ್ಃ ಎಂ.ಹೆಚ್.ಅಣ್ಣಯ್ಯನವರ,
ಬಿ.ಕಾಂ.ಎಲ್‌ಎಲ್‌ಬಿ (ವಿಶೇಷ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.

**ದಿನಾಂಕಃ 17 ನೇ ಜನವರಿ ಮಾಹೆ 2020**

**ಎಸ್.ಸಿ. ಸಂಖ್ಯೆ 88/2016**

ಫಿರ್ಯಾದಿದಾರರು ಃ ಕರ್ನಾಟಕ ಸರ್ಕಾರದ ಪರವಾಗಿ,
ಕಿತ್ತೂರು ಪೊಲೀಸ್ ಠಾಣೆ,
ಬೆಳಗಾವಿ ಜಿಲ್ಲೆ.

(ಪರವಾಗಿಃ ಶ್ರೀ. ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿತರು ಃ

1. ಮಂಜುಳಾ ತಂದೆ ಅಡಿವೆಪ್ಪಾ ಚೌಡಪ್ಪನವರ,
@ ಮಂಜುಳಾ ಗಂಡ ಅಮೃತಲಾಲ ಶಹಾ,
55 ವರ್ಷ, ಸಾಃ ಹೊಳಿನಾಗಲಾಪೂರ,
ತಾಃ ಬೈಲಹೊಂಗಲ, ಜಿಃ ಬೆಳಗಾವಿ.

2. ಈರನಗೌಡ ಪಾಟೀಲ, 32 ವರ್ಷ,
ಸಾಃ ಆಮಟೂರ, ತಾಃ ಬೈಲಹೊಂಗಲ,
ಜಿಃ ಬೆಳಗಾವಿ.

3. ಸಂದೀಪ ಗಳದ, 27 ವರ್ಷ,
ಸಾಃ ಹಲಗಾ, ಮಹಾವೀರ ಗಲ್ಲಿ,
ತಾಃ ಜಿಲ್ಲೆಃ ಬೆಳಗಾವಿ.

4. ಯಮನೂರಿ ಯಮನಪ್ಪಾ ಕಿಳ್ಳೆಕೇತ, 25 ವರ್ಷ
ಸಾಃ ಅಂಕಲಿ, ತಾಃ ಚಿಕ್ಕೋಡಿ, ಜಿಲ್ಲೆಃ ಬೆಳಗಾವಿ.

5. ಮಂಜು ಮಂಜುನಾಥ ಸಾಲಮಂಟಪಿ
ಅಃ ಕಿಳ್ಳೆಕೇತ, 30 ವರ್ಷ, ಸಾಃ ಚಿಂಚಕಂಡಿ,
ತಾಃ ಮುಧೋಳ.

(ಆ-1, 2 ಪರ ಶ್ರೀ. ಪಿ.ಎಸ್.ಕೆ., ವಕೀಲರು)
(ಆ-3 ಪರ ಶ್ರೀ. ವಿ.ಕೆ.ಕೆ., ವಕೀಲರು)
(ಆ-4, 5 ಪರ ಶ್ರೀ. ಬಿ.ಜೆ.ಜಿ./ಪಿ.ಬಿ.ಹೆಚ್ ವಕೀಲರು)

| | | |
|---|---|---|
| 1 | ಘಟನೆ ಜರುಗಿದ ದಿನಾಂಕಃ | 16.09.2015 |
| 2 | ಘಟನೆಯ ವರದಿ ದಿನಾಂಕ | 05.10.2015 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | ಆ-1, 2, 3 ರವರನ್ನು ದಿಃ 5.10.2015<br>ಆ-4, 5 ರವರನ್ನು ದಿಃ 26.01.2015 |
| 4 | ವಿಚಾರಣಾ ಪ್ರಾರಂಭ ದಿನಾಂಕ | 31.06.2017 |
| 5 | ವಿಚಾರಣಾ ಮುಕ್ತಾಯ ದಿನಾಂಕ | 26.09.2019 |
| 6 | ಫಿರ್ಯಾದಿಯ ಹೆಸರು | ಶ್ರೀ. ನಂಗನಗೌಡ ಪಾಟೀಲ, |
| 7 | ಆರೋಪಿಸಲ್ಪಟ್ಟ ಆಪಾದನಾ ಕಲಂ ಗಳು | ಭಾ.ದಂ.ಸಂ.ಕಲಂ 143, 147, 366(ಎ), 344, 370 ಸಹಕಲಂ 149 ಮತ್ತು ಎಸ್.ಸಿ./ಎಸ್.ಟಿ ಕಾನೂನು 1860 ಕಲಂ 3(1)(XII) (2) (V) ರಡಿಯಲ್ಲಿ |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ಗುನ್ಹಾ ಮಾಡಿದ್ದು ನಿಸ್ಸಂಶಯವಾಗಿ ಸಾಭೀತಾಗಿರುತ್ತದೆ. |
| 9 | ಶಿಕ್ಷೆ ಅಥವಾ ಆದೇಶ | ಕೊನೆಯಲ್ಲಿನ ಆದೇಶದಂತೆ |

* * * * *

## -ಃ ತೀರ್ಪು ಃ-

ಪ್ರಸ್ತುತ ಪ್ರಕರಣದಲ್ಲಿ ಚಾಸಾ.33/ಪ್ರಾಸಾ.15 ಶ್ರೀ. ಎಸ್.ಎ. ಅಂಗಡಿ, ಡಿ.ಎಸ್.ಪಿ. ಬೈಲಹೊಂಗಲ, (ಕಿತ್ತೂರು ಪೊಲೀಸ್ ಠಾಣೆ) ಇವರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ 143, 147, 366 ಎ, 344, 370

ಸಹಕಲಂ 149 ಮತ್ತು ಎಸ್.ಸಿ./ಎಸ್.ಟಿ ಕಾನೂನು 1989 ಕಲಂ 3(i)(XII)(2) (v) ರಡಿಯಲ್ಲಿ ಅಪರಾಧ ಮಾಡಿರುತ್ತಾರೆ ಅಂತಾ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆಃ

ಚಾಸಾ.1/ಫ್ರಾಸಾ.1 ಎನ್.ಎ.ಪಾಟೀ ಪಿಎಸ್ಐ ನಿಪ್ಪಾಣಿ ಇವರು ದಿನಾಂಕಃ 5.10.2015 ಬೆಳಿಗ್ಗೆ 9.00 ಗಂಟೆಗೆ ಠಾಣೆಯಲ್ಲಿದ್ದಾಗ ಖಚಿತ ಮಾಹಿತಿ ಬಂದಿದ್ದು, 1 ನೇ ಆರೋಪಿಯ ಮನೆಯಲ್ಲಿ ಎರಡು ಜನ ಗಂಡಸರೊಂದಿಗೆ ಎರಡು ಜನ ಅಪ್ರಾಪ್ತ ಬಾಲಕಿಯರನ್ನು ವೇಶ್ಯಾವಟಿಕೆಗಾಗಿ ರಾಜಸ್ಥಾನಕ್ಕೆ ಮಾರುವವರಿದ್ದಾರೆ ಅಂತಾ ಖಚಿತ ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಠಾಣಾ ಡೈರಿಯಲ್ಲಿ ನಮೂದಿಸಿ ಮೇಲಾಧಿಕಾರಿಯವರಿಗೆ ಸದರಿ ಮಾಹಿತಿಯನ್ನು ಮೌಖಿಕವಾಗಿ ತಿಳಿಸಿರುತ್ತಾರೆ.

3. ನಂತರ ಚಾಸಾ.8 ಅರುಣ ನಿರಗಟ್ಟಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನೌಕರರು, ಚಾಸಾ.9 ಸುಶೀಲಾ, ಸ್ವಂದನಾ ಸಂಸ್ಥೆಯ ಕಾರ್ಯದರ್ಶಿ ಇವರನ್ನು ಭರಮಾಡಿಕೊಂಡು ಸದರಿಯವರಿಗೆ ಮಾಹಿತಿ ತಿಳಿಸಿ ಚಾಸಾ.2 ಕುಮಾರಿ ಶೋಭಾ ಕರಿದೇಮನ್ನವರ, ಚಾಸಾ.3 ಬಾಬು ಬಾಲನ್ನವರ ಪಂಚರನ್ನಾಗಿ ಭರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ನಂತರ, ಚಾಸಾ.11 ರಿಂದ 15 ಸಿಬ್ಬಂದಿಯವರನ್ನು ಕರೆಯಿಸಿ ಅವರಿಗೂ ಸಹಿತ ವಿಷಯ ತಿಳಿಸಿರುತ್ತಾರೆ.

4. ನಂತರ ಎಲ್ಲರೂ ಬೆಳಿಗ್ಗೆ 10.30 ಗಂಟೆಗೆ ಠಾಣಾ ಜೀಪಿನಲ್ಲಿ ಮತ್ತು ಇನ್ನೊಂದು ಖಾಸಗಿ ವಾಹನದಲ್ಲಿ ಹೊಳಿನಾಗಲಾಪೂರಕ್ಕೆ ಹೊರಟು 11 ಗಂಟೆಗೆ ತಲುಪಿದ್ದು, ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ಚಾಸಾ.8, 9, 14,

15 ಇವರನ್ನು 1 ನೇ ಆರೋಪಿಯ ಮನೆಯೊಳಗಡೆ ಕಳುಹಿಸಿಕೊಟ್ಟಿದ್ದು, ಅವರು ಅಲ್ಲಿಗೆ ಹೋಗಿ ವಿಚಾರ ತಿಳಿದುಕೊಂಡು ಚಾಸಾ.1 ಇವರಿಗೆ ಕೈ ಸನ್ನೆ ಮುಖಾಂತರ ಸೂಚನೆ ನೀಡಿದ್ದು, ನಂತರ ಎಲ್ಲರೂ ಸೇರಿ 1 ನೇ ಆರೋಪಿಯ ಮನೆಯ ಮೇಲೆ ದಾಳಿ ಮಾಡಿರುತ್ತಾರೆ.

5. ದಾಳಿ ಮಾಡಿದಾಗ 1 ನೇ ಆರೋಪಿ ಮನೆಯಲ್ಲಿ ಸಿಕ್ಕಿದ್ದು ಇಬ್ಬರೂ ಅಪ್ರಾಪ್ತ ಬಾಲಕಿಯರಿದ್ದು ಅವರ ಹೆಸರು, ವಯಸ್ಸು ಕೇಳಲಾಗಿ ಅವರು ತಮ್ಮ ಹೆಸರು ವಯಸ್ಸು ತಿಳಿಸಿದ್ದು, 16 ವರ್ಷದವರಿರುತ್ತಾರೆ ಅಂತಾ ತಿಳಿಸಿರುತ್ತಾರೆ. ಚಾಸಾ.6 ನೊಂದ ಬಾಲಕಿ ಚಿಕ್ಕೋಡಿ ತಾಲೂಕು ಅಂಕಲಿ ಗ್ರಾಮದವಳಾಗಿರುತ್ತಾಳೆ ಅವಳನ್ನು ವಿಚಾರ ಮಾಡಿದಾಗ 1 ನೇ ಆರೋಪಿ ವೇಶಾವಾಟಿಕೆಗೆ ಮಾರಾಟ ಮಾಡಲು ರಾಜಸ್ಥಾನಕ್ಕೆ ಕರೆದುಕೊಂಡು ಹೋಗುವದಕೋಸ್ಕರವಾಗಿ ಮನೆಯಲ್ಲಿ ಇಟ್ಟಿರುತ್ತಾರೆ ಅಂತಾ ತಿಳಿಸಿರುತ್ತಾರೆ. ನಂತರ ಚಾಸಾ.7 ನೊಂದ ಬಾಲಕಿ ಬೆಳಗಾವಿ ತಾಲೂಕು ಅಲತಗಾ ಗ್ರಾಮದಳಾಗಿದ್ದು, ಅವಳನ್ನು 3 ನೇ ಆರೋಪಿ ವೇಶಾವಾಟಿಕೆಗಾಗಿ ಮಾರಾಟ ಮಾಡಲು 1 ನೇ ಆರೋಪಿಯ ಮನೆಯಲ್ಲಿ ಇಟ್ಟಿದ್ದಾರೆಂದು ತಿಳಿಸಿದ್ದಾರೆ.

6. ನಂತರ ಆರೋಪಿ-1 ರಿಂದ 3 ಇವರನ್ನು ವಿಚಾರಿಸಿದಾಗ ಸದರಿಯವರು ಒಪ್ಪಿಕೊಂಡಿದ್ದು, ನಂತರ ಇದಕ್ಕೆ ಸಂಬಂಧಪಟ್ಟಂತೆ ಸ್ಥಳದಲ್ಲಿ ನಿ.ಪಿ.1 ರಂತೆ ಮಹಜರ್, ನಿ.ಪಿ.2 ಕಚ್ಚಾ ನಕಾಶೆ, ನಿ.ಪಿ.3 ಪೋಟೋ ತೆಗೆದು ನಂತರ ಆರೋಪಿತರನ್ನು ದಸ್ತಗಿರಿ ಮಾಡಿಕೊಂಡು ನೊಂದ ಬಾಲಕಿಯನ್ನು ಕರೆದುಕೊಂಡು ಠಾಣೆಗೆ ಬಂದು ಚಾಸಾ.32/ಪ್ರಾಸಾ.14 ಡಿ.ಬಿ.ಇಟಿ ಇವರ ಬಳಿ ನಿ.ಪಿ.4 ದೂರು ಕೊಟ್ಟಿರುತ್ತಾರೆ.

7. ನಂತರ ಫ್ರಾಸಾ.14/ಚಾಸಾ.32 ಡಿ.ಬಿ. ಇಟಿ ರವರು ಚಾಸಾ.1 ರವರು ಕೊಟ್ಟಂತಹ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.236/15 ರಲ್ಲಿ ಕೇಸು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ಮುಂದಿನ ತನಿಖೆಯನ್ನು ಚಾಸಾ.33/ ಫ್ರಾಸಾ.15 ಎಸ್.ಎ.ಅಂಗಡಿ ಡಿ.ಎಸ್.ಪಿ ರವರಿಗೆ ವಹಿಸಿಕೊಟ್ಟಿರುತ್ತಾರೆ.

8. ನಂತರ ಚಾಸಾ.33/ಫ್ರಾಸಾ.15 ಎಸ್.ಎ.ಅಂಗಡಿ ಡಿ.ಎಸ್.ಪಿ ರವರು ಸದರಿ ಪ್ರಕರಣದ ತನಿಖೆಯನ್ನು ಮುಂದುವರೆಸಿ, ನೊಂದ ಬಾಲಕಿಯರನ್ನು ಮತ್ತು ಆರೋಪಿ-1 ರಿಂದ 3 ಇವರನ್ನು ವಿಚಾರ ಮಾಡಿದ್ದು, ನೊಂದ ಬಾಲಕಿಯರ ಹೇಳಿಕೆಗಳನ್ನು ಪಡೆಯಲು ಚಾಸಾ.15 ಇವರಿಗೆ ಆದೇಶ ಮಾಡಿದ್ದು, ನಂತರ ಸದರಿಯವರು ಹೇಳಿಕೆ ಪಡೆದುಕೊಂಡು ನಿ.ಪಿ.14 ರಂತೆ ವರದಿ ಕೊಟ್ಟಿರುತ್ತಾರೆ. ನಂತರ ನೊಂದ ಬಾಲಕಿಯರನ್ನು ಮಹಿಳಾ ಸಾಂತ್ವಾನ ಕೇಂದ್ರ ಬೆಳಗಾವಿಗೆ ಕಳುಹಿಸಿಕೊಟ್ಟಿರುತ್ತಾರೆ.

9. ನಂತರ ಆರೋಪಿ -1 ರಿಂದ 3 ರವರನ್ನು ವಿಚಾರಣೆ ಮಾಡಿ ಸ್ವಇಚ್ಛೆ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ನಂತರ ಚಾಸಾ.8, 9, 11 ರಿಂದ 15 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಂತರ ಮುಂದಿನ ತನಿಖೆಗೆ ಆರೋಪಿತರ ಅವಶ್ಯಕತೆ ಇಲ್ಲದೆ ಇದ್ದುದರಿಂದ ರಿಮ್ಯಾಂಡ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ನಂತರ ಪಿಡಿಓ ನಾಗಲಾಪೂರ ಇವರಿಗೆ ಬಸಪ್ಪ ಕಳ್ಳಿಮನಿ ಮತ್ತು 1 ನೇ ಆರೋಪಿಯ ಮನೆಯ ಉತಾರವನ್ನು ನೀಡುವಂತೆ ಮನವಿ ಮಾಡಿರುತ್ತಾರೆ. ನಂತರ ಆರೋಪಿ-1 ರಿಂದ 3 ಇವರ ಜಾತಿ ಪ್ರಮಾಣ ಪತ್ರ, ನೊಂದ ಬಾಲಕಿಯರ ಜಾತಿ ಪ್ರಮಾಣ ಪತ್ರ ನೀಡುವ ಕುರಿತು

ತಹಶೀಲ್ದಾರವರಿಗೆ ಮನವಿ ಮಾಡಿರುತ್ತಾರೆ. ನೊಂದ ಬಾಲಕಿಯರ ವಯಸ್ಸಿಗೆ ಸಂಬಂಧಪಟ್ಟಂತೆ ಶಾಲಾ ಮುಖೋಪಾಧ್ಯಾಯರಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದು, 2 ಮತ್ತು 3 ನೇ ಆರೋಪಿತರ ರಹವಾಸಿ ಪತ್ರ, ಘಟನಾ ಸ್ಥಳಕ್ಕೆ ಸಂಬಂಧಪಟ್ಟಂತೆ ಪಿಡಬ್ಲ್ಯೂಡಿ ರವರು ತಯಾರು ಮಾಡಿದಂತಹ ನಕ್ಷೆ ಪಡೆದುಕೊಂಡಿರುತ್ತಾರೆ.

10. ಆರೋಪಿ-4, 5 ರವರ ಪತ್ತೇಗೋಸ್ಕರವಾಗಿ ಸಿಬ್ಬಂದಿಯವರನ್ನು ನೇಮಕ ಮಾಡಿರುತ್ತಾರೆ. ನೊಂದ ಬಾಲಕಿಯರು ಕಿತ್ತೂರು ನ್ಯಾಯಾಲಯದಲ್ಲಿ ದಂ.ಪ್ರ.ಸಂ.ಕಲಂ 164 ರಡಿಯಲ್ಲಿ ಕೊಟ್ಟಂತಹ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ನಂತರ ದಿಃ 19.1.2016 ರಂದು ಆರೋಪಿ-4, 5 ಇವರನ್ನು ಹಾಜರುಪಡಿಸಿದ್ದು, ಅವರನ್ನು ಸಹಿತ ವಿಚಾರಣೆ ಮಾಡಿ ನಂತರ ನ್ಯಾಯಾಲಯಕ್ಕೆ ರಿಮ್ಯಾಂಡ ಅರ್ಜಿಯೊಂದಿಗೆ ಹಾಜರುಪಡಿಸಿರುತ್ತಾರೆ. ಎಲ್ಲಾ ದಾಖಲಾತಿಗಳನ್ನು, ಸಾಕ್ಷಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ತನಿಖೆ ಪೂರ್ತಿಗೊಂಡಿದ್ದರಿಂದ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

11. ನಂತರ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಸಂಜ್ಞೆ ಪಡೆದುಕೊಂಡು ಕೇಸು ದಾಖಲಿಸಿಕೊಂಡು ಆರೋಪಿತರಿಗೆ ಸಮನ್ಸ ಕಳುಹಿಸಲಾಗಿ ಆರೋಪಿತರು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಸದರಿ ಆರೋಪಿತರ ಮೇಲೆ ದೋಷಾರೋಪಣೆ ರಚನೆ ಮಾಡಲು ಸಾಕಷ್ಟು ಕಾರಣಗಳು ಇವೆ ಅಂತಾ ನ್ಯಾಯಾಲಯಕ್ಕೆ ಕಂಡುಬಂದಿದ್ದರಿಂದ ದೋಷಾರೋಪಣೆಯನ್ನು ರಚನೆ ಮಾಡಿ ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ತಾವು ಯಾವುದೇ

ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕು ಅಂತಾ ನ್ಯಾಯಾಲಯಕ್ಕೆ ಕೇಳಿಕೊಂಡಿರುತ್ತಾರೆ.

12. ಆರೋಪಿತರ ಮೇಲೆ ಇರುವ ಆಪಾದನೆಯನ್ನು ರುಜುವಾತುಪಡಿಸಲು ಅಭಿಯೋಜಕ ಪಕ್ಷವು ಫ್ರಾಸಾ.1 ರಿಂದ 24 ಸಾಕ್ಷಿದಾರರನ್ನು ವಿಚಾರಣೆ ಮಾಡಿ, ನಿ.ಪಿ.1 ರಿಂದ 34 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ.

13. ಅಭಿಯೋಜಕ ಪಕ್ಷದ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ದಂ.ಪ್ರ.ಸಂ.ಕಲಂ.313 ರಡಿನಲ್ಲಿ ಹೇಳಿಕೆಗಳನ್ನು ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ಎಲ್ಲಾ ಅಂಶಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿ ಇರುವುದಿಲ್ಲ. ನ್ಯಾಯಾಲಯಕ್ಕೆ ಹೇಳುವುದು ಏನು ಇರುವುದಿಲ್ಲ ಅಂತಾ ತಿಳಿಸಿರುತ್ತಾರೆ.

14. ಆರೋಪಿಗಳ ಪರ ವಕೀಲರ ಹಾಗೂ ಅಭಿಯೋಜಕರ ವಾದ ವಿವಾದವನ್ನು ಕೇಳಲಾಯಿತು.

15. ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ ನ್ಯಾಯಾಲಯಕ್ಕೆ ಈ ಕೆಳಕಂಡಂತಹ ಅಂಶಗಳು ಚರ್ಚೆಗೆ ಬಂದಿರುತ್ತವೆ.

1. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ಆರೋಪಿತರು ಕಿತ್ತೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೊಳೆನಾಗಲಾಪೂರ ಗ್ರಾಮದಲ್ಲಿ ಆರೋಪಿತರು ಸಂಗನಮತ ಮಾಡಿಕೊಂಡು ನೊಂದ ಬಾಲಕಿಯರು ಅಪ್ರಾಪ್ತ ವಯಸ್ಕರಿರುತ್ತಾರೆ ಅಂತಾ ಗೊತ್ತಿದ್ದರೂ ಸಹ ದಿಃ 16.9.2015 ರಂದು ನೊಂದ ಬಾಲಕಿಯರನ್ನು ಜಾತ್ರೆಗೆ ಹೋಗೋಣ ಅಂತಾ ಹೇಳಿ ಪುಸಲಾಯಿಸಿ ನಂಬಿಸಿ ಅಪಹರಿಸಿಕೊಂಡು ಹೋಗಿ ಭಾ.ದಂ.ಸಂ.ಕಲಂ 366 ಎ ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ

ಅಪರಾಧ ಮಾಡಿರುತ್ತಾರೆ ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸುತ್ತದೆಯೇ?

2. ಎರಡನೆಯದಾಗಿ ಅದೇ ದಿನ ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ನೊಂದ ಬಾಲಕಿಯರನ್ನು 1 ನೇ ಆರೋಪಿ ವಾಸಿಸುವ ಚಾಸಾ.16 ಗಂಗವ್ವ ಕಾರಿಮನಿ ಇವರ ಮನೆ ನಂ.436 ರಲ್ಲಿ ಮುಂಜಾನೆ 11 ಗಂಟೆಗೆ ಕರೆದುಕೊಂಡು ಬಂದು 8 ದಿನಗಳವರೆಗೆ ಅಕ್ರಮ ಬಂಧನದಲ್ಲಿಟ್ಟು ಭಾ.ದಂ.ಸಂ.ಕಲಂ 344 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸುತ್ತದೆಯೇ?

3. ಮೂರನೆಯದಾಗಿ ಅದೇ ದಿನ ಸ್ಥಳ ಮತ್ತು ಸಮಯದಲ್ಲಿ, 3 ನೇ ಆರೋಪಿ ನೊಂದ ಬಾಲಕಿ ಪರಿಶಿಷ್ಟ ಜಾತಿಗೆ ಸೇರಿದವಳು ಮತ್ತು ಅಪ್ರಾಪ್ತಳು ಅಂತಾ ಗೊತ್ತಿದ್ದರೂ ಸಹ ಹೊಳೆನಾಗಲಾಪೂರದಲ್ಲಿ ತನ್ನ ಸಂಬಂಧಿಕರ ಮನೆಯಲ್ಲಿ ಹುಟ್ಟುಹಬ್ಬ ಇರುತ್ತದೆ ಹೋಗೋಣ ಅಂತಾ ನಂಬಿಸಿ 2.10.2015 ಸಂಜೆ 3.00 ಗಂಟೆಗೆ ಹೊಳೆನಾಗಲಾಪೂರಕ್ಕೆ ಆರೋಪಿ-1, 2 ಇವರ ಹತ್ತಿರ ಕರೆದುಕೊಂಡು ಬಂದು ಹಣ ಪಡೆದುಕೊಂಡು ಬೇರೆ ಕಡೆ ಮಾರಾಟ ಮಾಡುವ ಉದ್ದೇಶ ಹೊಂದಿದ್ದು, ಈ ಮೂಲಕ ಭಾ.ದಂ.ಸಂ.ಕಲಂ 370 ಸಹಕಲಂ 149 ಮತ್ತು ಎಸ್.ಸಿ/ಎಸ್.ಟಿ. ಕಾನೂನು 1989 ಕಲಂ 3(1)(xii) (2)(v) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸುತ್ತದೆಯೇ?

4. ನಾಲ್ಕನೆಯದಾಗಿ ಅದೇ ದಿನ ಸ್ಥಳ ಮತ್ತು ಸಮಯದಲ್ಲಿ, ಆರೋಪಿತರು ನೊಂದ ಬಾಲಕಿಯು ಪರಿಶಿಷ್ಟ ಜಾತಿಗೆ ಸೇರಿದವಳು ಮತ್ತು ಅಪ್ರಾಪ್ತಳು ಅಂತಾ ಗೊತ್ತಿದ್ದರೂ ಸಹ ಅವಳನ್ನು ಶೋಷಣೆಗೆ ಒಳಪಡಿಸುವ ಉದ್ದೇಶದಿಂದ ಗೈರಕಾಯ್ದೆಶೀರ ಮಂಡಳಿಯಾಗಿ ಬಂದು ದೊಂಬಿಯೆನ್ನುಂಟು ಮಾಡಿ ಭಾ.ದಂ.ಸಂ.ಕಲಂ 143, 147 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸುತ್ತದೆಯೇ?

5. ಯಾವ ಆದೇಶ?

16. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರವು ಕೆಳಕಂಡ ಕಾರಣಗಳಿಂದ ಹೀಗಿರುತ್ತದೆಃ

ಅಂಶ ಸಂಖ್ಯೆ 1 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 2 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 3 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 4 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 5 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

17. ಅಂಶ ಸಂಖ್ಯೆ 1 ರಿಂದ 4ಃ- ನ್ಯಾಯಾಲಯದ ಅನುಕೂಲಕೋಸ್ಕರವಾಗಿ ಅಂಶ ಸಂಖ್ಯೆ 1 ರಿಂದ 4 ಅನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

ಉಭಯ ವಕೀಲರ ವಾದವನ್ನು ಹಾಗೂ ಸಾಕ್ಷಿ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಭಾ.ದಂ.ಸಂ.ಕಲಂ 366(ಎ) ರಡಿಯಲ್ಲಿ ಆಪರಾಧ ಆಗಬೇಕಾದಲ್ಲಿ ಈ ಕೆಳಕಂಡ ಅಂಶಗಳನ್ನು ಅಭಿಯೋಜಕ ಪಕ್ಷವು ರುಜುವಾತುಪಡಿಸಬೇಕಾಗುತ್ತದೆ.

(ಎ) 18 ವರ್ಷ ಒಳಗಿನ ಅಪ್ರಾಪ್ತ ವಯಸ್ಸಿನ ಬಾಲಕಿ ಇರಬೇಕು,

(ಬಿ) ಸದರಿ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಬೇರೊಬ್ಬ ವ್ಯಕ್ತಿಗೆ ವಿಧಿನಿಷಿದ್ಧ ಸಂಭೋಗ ನಡೆಸಲು ಅವಳನ್ನು ಬಲತ್ಕರಿಸಬೇಕು.

(ಸಿ) ನಂತರ ಅವಳನ್ನು ಬಲತ್ಕರಿಸುವ ಅಥವಾ ದುರ್ಮಾಗಕ್ಕೆ ಪ್ರೇರೆಪಿಸುವ ಸಂಭವ ಇದೆ ಎಂದು ತಿಳಿದು ಯಾವುದೇ ಕೃತ್ಯವನ್ನು ಮಾಡಲು ಪ್ರೇರೆಪಿಸುವುದು, ಈ ಎಲ್ಲಾ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ.

<u>ಅದೇ ಪ್ರಕಾರ ಭಾ.ದಂ.ಸಂ.ಕಲಂ 370 ರಡಿಯಲ್ಲಿ ಈ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ.</u>

(ಎ) ಯಾವುದೇ ವ್ಯಕ್ತಿಯನ್ನು ಗುಲಾಮರನ್ನಾಗಿ ಆಮದು ಮಾಡಿಕೊಳ್ಳುವ, ರಫ್ತು ಮಾಡುವ, ಸ್ಥಳಾಂತರಿಸುವ, ಕೊಂಡುಕೊಳ್ಳುವ ಅಥವಾ ಮಾರಾಟ ಮಾಡುವ ಅಥವಾ ವಿಲೇವಾರಿ ಮಾಡುವುದು ಅಥವಾ ಆ ವ್ಯಕ್ತಿಯ ಇಚ್ಚೆಗೆ ಹಾಗೂ ಮನಸ್ಸಿಗೆ ವಿರುದ್ಧವಾಗಿ ತಡೆ ಹಿಡಿಯುವುದು ಈ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ.

<u>ಆರೋಪಿತರು ಈ ಕೆಳಕಂಡ ಅಂಶಗಳನ್ನು ಒಪ್ಪಿಕೊಂಡಿರುತ್ತಾರೆಃ</u>

(ಎ) ಘಟನೆ ದಿನಾಂಕಃ 5.10.2015 ರಂದು ನಡೆದಿದ್ದು, ಆ ಸಮಯದಲ್ಲಿ ಚಾಸಾ.7/ಫ್ರಾಸಾ.3 ನೊಂದ ಬಾಲಕಿ ಹಿಂದು ಮಹರ ಪರಿಶಿಷ್ಟ ಜಾತಿಗೆ ಸೇರಿದವಳು ಹಾಗೂ ಅಪ್ರಾಪ್ತ ವಯಸ್ಕಳಾಗಿದ್ದಳು ಹಾಗೂ ಸದರಿ ಬಾಲಕಿಯ ಸ್ವಂತ ಊರು ಅಳತಗಾ, ಬೆಳಗಾವಿಯವಳು ಆಗಿರುತ್ತಾಳೆ ಎಂಬುದರ ಬಗ್ಗೆ

(ಬಿ) ಚಾಸಾ.6/ಫ್ರಾಸಾ,7 ನೊಂದ ಬಾಲಕಿ, ಕಿಳ್ಳೇಕೆತರ ಪರಿಶಿಷ್ಟ ಜಾತಿಗೆ ಸೇರಿದವಳು ಮತ್ತು ಅಂಕಲಿ ಗ್ರಾಮದವಳಾಗಿರುತ್ತಾಳೆ ಎಂಬುದರ ಬಗ್ಗೆ

(ಸಿ) ಆರೋಪಿತರು ಮೇಲ್ಜಾತಿಗೆ ಸೇರಿದವರಿರುತ್ತಾರೆ ಎಂಬುದರ ಬಗ್ಗೆ ಈ ಅಂಶಗಳನ್ನು ಒಪ್ಪಿಕೊಂಡಿರುತ್ತಾರೆ.

18. <u>ನೊಂದ ಬಾಲಕಿಯವರು ಅಪ್ರಾಪ್ತ ವಯಸ್ಕರು ಹಾಗೂ ಪರಿಶಿಷ್ಟ ಜಾತಿಯವರಾಗಿದ್ದು ಅವರನ್ನು ಅಪಹರಿಸಿದ ಬಗ್ಗೆ, ಅಕ್ರಮವಾಗಿ ಬಂಧನದಲ್ಲಿಟ್ಟ ಬಗ್ಗೆ ಮಾರಾಟ ಮಾಡುವುದರ ಬಗ್ಗೆ (ಭಾ.ದಂ.ಸಂ.ಕಲಂ 366 ಎ, 344, 370 ಮತ್ತು ಎಸ್.ಸಿ1/ಎಸ್.ಟಿ. ಕಾನೂನು ಕಲಂ 3(1)(XI)(2)(V)ಃ</u>

ಹಾಗಾದರೆ ನೊಂದ ಬಾಲಕಿಯರು ತಮ್ಮ ಸ್ವಂತ ಊರು ಬಿಟ್ಟು 1 ನೇ ಆರೋಪಿಯ ಮನೆಗೆ ಬರಲು ಕಾರಣ ಏನು, ಆರೋಪಿ 1 ರಿಂದ 3 ರವರಿಗೆ ನೊಂದ ಬಾಲಕಿಯರು ಅಪ್ರಾಪ್ತ ವಯಸ್ಕರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರಂತಾ ಗೊತ್ತಿದ್ದರೂ ಸಹಿತ ಅವರನ್ನು ಪುಸಲಾಯಿತು ಕರೆದುಕೊಂಡು ಬಂದು ತಮ್ಮ ಮನೆಯಲ್ಲಿ ಅಕ್ರಮವಾಗಿ ಬಂಧನದಲ್ಲಿಟ್ಟಿದ್ದನ್ನು ಪರಿಶೀಲಿಸಲಾಗಿ, ಆರೋಪಿ 1 ರಿಂದ 3 ಇವರು ನೊಂದ ಬಾಲಕಿಯನ್ನು ಅಪಹರಿಸಿಕೊಂಡು ಬಂದು ಮಾರಾಟ ಮಾಡಲು ಅಥವಾ ವಿಧಿನಿಷಿದ್ಧ ಸಂಭೋಗ ನಡೆಸಲು ಬಲತ್ಕರಿಸಿದ್ದಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನ್ಯಾಯಾಲಯವು ಪರಿಗಣಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಫ್ರಾಸಾ.1/ಚಾಸಾ.1 ಎನ್.ಎ.ಪಾಟೀಲ, ಪಿ.ಎಸ್ಐ ನಿಪ್ಪಾಣಿ ಗ್ರಾಮೀಣ ಪೊಲೀಸ್ ಠಾಣೆ ಇವರು ಈ ಕೇಸಿನ ಫಿರ್ಯಾದಿದಾರರು, ಮಹಜರ್ ಸಾಕ್ಷಿ ಹಾಗೂ ಪ್ರತ್ಯಕ್ಷ ಸಾಕ್ಷಿಯಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 05-10-2015 ರಂದು ಬೆಳಿಗ್ಗೆ 9 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ನನಗೆ ನನ್ನ ಬಾತ್ಮಿದಾರರಿಂದ ಒಂದು ಮಾಹಿತಿ ಬಂದಿದ್ದು, ಆ ಪ್ರಕಾರ 1 ನೇ ಆರೋಪಿಯು ತನ್ನ ಮನೆಯಲ್ಲಿ ಇಬ್ಬರು ಗಂಡಸರೊಂದಿಗೆ ಸೇರಿ ಇಬ್ಬರು ಅಪ್ರಾಪ್ತ ಬಾಲಕಿಯರನ್ನು ವೇಶ್ಯವಾಟಿಕೆಗಾಗಿ ರಾಜಾಸ್ಥಾನಕ್ಕೆ ಮಾರಾಟ ಮಾಡುವ ಇರಾದೆಯಿಂದ ಇದ್ದಾರೆ ಎಂದು ನನಗೆ ತಿಳಿದು ಬಂದಿತ್ತು. ಈ ಮಾಹಿತಿಯ ಬಗ್ಗೆ ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿದ್ದೆನು. ಆ ಬಳಿಕ ಈ ವಿಚಾರವನ್ನು ನನ್ನ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದೆನು. ನಾನು ನಮ್ಮ ಠಾಣೆಗೆ ಚಾಸ-8 ಮತ್ತು 9 ಅವರನ್ನು ಬರಮಾಡಿಕೊಂಡೆನು. ಚಾಸ-2 ಮತ್ತು 3 ಇವರನ್ನು ಠಾಣೆಗೆ ಕರೆಯಿಸಿ ಅವರನ್ನು ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಬೇಕು ಎಂದು ಕೇಳಿಕೊಂಡೆನು. ನಮ್ಮ ಠಾಣಾ

ಸಿಬ್ಬಂದಿಗಳು ಆದ ಚಾಸ-11 ರಿಂದ 15 ಇವರಿಗೆ ಈ ವಿಚಾರವನ್ನು ತಿಳಿಸಿ ಅವರು ದಾಳಿ ಕಾಲಕ್ಕೆ ನಮ್ಮ ಜೊತೆ ಇರಬೇಕು ಎಂದು ತಿಳಿಸಿದೆನು. ಅದೇ ಬೆಳಿಗ್ಗೆ 10.30 ಗಂಟೆಗೆ ನಮ್ಮ ಠಾಣಾ ಜೀಪಿನಲ್ಲಿ ಮತ್ತು ಇನ್ನೊಂದು ಖಾಸಗಿ ವಾಹನದಲ್ಲಿ ನಾನು, ಚಾಸ-2 ಮತ್ತು 3, 8 ಮತ್ತು 9 ಮತ್ತು 11 ರಿಂದ 15 ಇವರೊಂದಿಗೆ ಹೊಳಿನಾಗಲಾಪುರ ಹೊರಟು 11 ಗಂಟೆಗೆ ಅಲ್ಲಿ ತಲುಪಿದೆವು. 1 ನೇ ಆರೋಪಿಯ ಮನೆಯಿಂದ ಸ್ವಲ್ಪ ದೂರದಲ್ಲಿ ನಮ್ಮ ವಾಹನಗಳನ್ನು ನಿಲ್ಲಿಸಿ ಚಾಸ-8 ಮತ್ತು 9, ಮತ್ತು ನಮ್ಮ ಸಿಬ್ಬಂದಿಗಳು ಆದ ಚಾಸ-14 ಮತ್ತು 15 ಇವರನ್ನು 1 ನೇ ಆರೋಪಿಯ ಮನೆಯ ಒಳಗಡೆ ಹೋಗಿ ಅವರೊಂದಿಗೆ ವಿಚಾರಿಸಬೇಕು ಎಂದು ಹೇಳಿ ಕಳುಹಿಸಿಕೊಟ್ಟೆನು. ಅವರಿಗೆ ನಾನು ಈ ವಿಚಾರ ಖಚಿತವಾದಲ್ಲಿ ಕೈಸನ್ನೆ ಮೂಲಕ ನನಗೆ ಸೂಚನೆ ಕೊಡಬೇಕು ಎಂದು ನಾನು ಅವರಿಗೆ ತಿಳಿಸಿದೆನು. ಆ ಪ್ರಕಾರ ಸುಮಾರು 11.45 ಗಂಟೆಗೆ ಚಾಸ-14 ರವರು 1 ನೇ ಆರೋಪಿಯ ಮನೆಯ ಹೊರಗಡೆ ಬಂದು ನನಗೆ ಕೈ ಸನ್ನೆ ಮಾಡಿ ಸೂಚನೆ ಕೊಟ್ಟರು. ಆ ಬಳಿಕ ನಾನು ಪಂಚರಾದ ಚಾಸ-2 ಮತ್ತು 3 ಮತ್ತು ನಮ್ಮ ಜೊತೆ ಇದ್ದ ಇತರ ಸಿಬ್ಬಂದಿಗಳೊಂದಿಗೆ 1 ನೇ ಆರೋಪಿ ಮನೆಗೆ ದಾಳಿ ಮಾಡಿದೆವು. ನಾವು ದಾಳಿ ಮಾಡಿದ ಕಾಲಕ್ಕೆ 1 ನೇ ಆರೋಪಿಯ ಮನೆಯಲ್ಲಿ ಇಬ್ಬರು ಅಪ್ರಾಪ್ತ ವಯಸ್ಸಿನ ಬಾಲಕಿಯರು ಇದ್ದರು. <u>ನಾವು ಆ ಹೆಸರು ಕೇಳಿದಾಗ ಒಬ್ಬರು ಆಕೆಯ ಹೆಸರನ್ನು ರೂಪಾ ಕಿಳ್ಳಿಕೇತ ಆಕೆಯ ವಯಸ್ಸು 16 ವರ್ಷ ಮತ್ತು ಇನ್ನೊಬ್ಬರು ತನ್ನ ಹೆಸರು ಪೂಜಾ ಕಾಂಬಳೆ ವಯಸ್ಸು 16 ವರ್ಷ ಎಂದು ತಿಳಿಸಿದಳು. ನಾನು ನೊಂದ ಬಾಲಕಿ ಚಾಸಾ-6 ಅವರನ್ನು ವಿಚಾರಿಸಿದಾಗ ಆಕೆ ತಾನು ಚಿಕ್ಕೋಡಿ ತಾಲೂಕು ಅಂಕಲಿವಳು ಮತ್ತು ಆಕೆಯನ್ನು ಆಕೆಯ ಸಂಬಂಧಿಯಾದಂತಹ 5 ನೇ ಆರೋಪಿಯು ಮತ್ತು 4 ನೇ ಆರೋಪಿ ಸೇರಿ 1 ನೇ ಆರೋಪಿಯ ಮನೆಗೆ ಕರೆತಂದಿದ್ದು ಮತ್ತು ಆ</u>

ಮೊದಲು ಆಕೆಯನ್ನು ವೇಶ್ಯವಾಟಿಕೆಗೆ ಮಾರಾಟ ಮಾಡಲು ಒಮ್ಮೆ ರಾಜಾಸ್ಥಾನಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ವ್ಯಾಪಾರ ಕುದರದೇ ಇದ್ದುದರಿಂದ ಪುನಃ ಆಕೆಯನ್ನು ವಾಪಸ್ಸು ಕರೆತಂದು 1 ನೇ ಆರೋಪಿಯ ಮನೆಯಲ್ಲಿಟ್ಟಿದ್ದಾರೆಂದು ಹೇಳಿದರು. ಇನ್ನೊರ್ವ ನೊಂದ ಬಾಲಕಿ ಚಾಸ-7 ಅವರನ್ನು 3 ನೇ ಆರೋಪಿಯು ಬೆಳಗಾವಿ ತಾಲೂಕಿನಿಂದ ಕರೆದುಕೊಂಡು ಬಂದು ವೇಶ್ಯವಾಟಿಕೆಗಾಗಿ ಮಾರಾಟ ಮಾಡುವ ಸಲುವಾಗಿ 1 ನೇ ಆರೋಪಿಯ ಮನೆಯಲ್ಲಿಟ್ಟಿದ್ದಾರೆಂದು ತಿಳಿಸಿದರು. ನಾವು ದಾಳಿ ಮಾಡುವ ಕಾಲಕ್ಕೆ 1 ನೇ ಆರೋಪಿತನ ಮನೆಯಲ್ಲಿ 1 ರಿಂದ 3 ನೇ ಆರೋಪಿತರು ಇದ್ದರು. ಅವರನ್ನು ವಿಚಾರಿಸಿದಾಗ ಅವರು ಕೂಡ ತಾವು ಈ ನೊಂದ ಬಾಲಕಿಯರನ್ನು ವೇಶ್ಯವಾಟಿಕೆಗೆ ಮಾರಾಟ ಮಾಡುವ ಸಲುವಾಗಿ ಆ ಮನೆಯಲ್ಲಿ ತಂದು ಇಟ್ಟಿರುವುದಾಗಿ ನನ್ನ ಮುಂದೆ ಒಪ್ಪಿಕೊಂಡಿರುತ್ತಾರೆ ಅಂತಾ ಸಾಕ್ಷ್ಯ ನುಡಿದಿರುತ್ತಾರೆ.

19. ಇದಕ್ಕೆ ಪೂರಕವಾಗಿ ಫ್ರಾಸಾ.1./ಚಾಸಾ.12 ಸುರೇಶ ಗುಂಡು ಕಲ್ಯಾಣಪುರಕರ, ಮುಖ್ಯ ಆರಕ್ಷಕರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 5.10.2015 ರಂದು ಮುಂಜಾನೆ 9.30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಪಿಎಸ್ಐ ಫ್ರಾಸಾ.1 ರವರು ನನಗೆ ಮತ್ತು ಚಾಸಾ.11, 13, 14, 15 ರವರನ್ನು ಕರೆದು ಹೊಳೆನಾಗಲಾಪೂರ ಗ್ರಾಮದಲ್ಲಿ ಗಾಂವಕಾನದ ಜನತಾ ಪ್ಲಾಟನಲ್ಲಿ ಒಬ್ಬ ಮಹಿಳೆ ಮತ್ತು ಇಬ್ಬರೂ ಗಂಡಸರು ಇಬ್ಬರೂ ಅಪ್ರಾಪ್ತ ಬಾಲಕಿಯನ್ನು ಮಾರಾಟ ಮಾಡಲು ತಂದು ಇಟ್ಟಿರುತ್ತಾರೆಂದು ಬಾತ್ಮೀ ಬಂದಿದ್ದು, ಈ ಬಗ್ಗೆ ಪರಿಶೀಲನೆ ಮಾಡುವಂತೆ ತಿಳಿಸಿದರು. ಪಂಚರನ್ನು ಕರೆಯಲು ತಿಳಿಸಿದ್ದರಿಂದ ಫ್ರಾಸಾ.2 ಮತ್ತು 4 ರವರನ್ನು ಕರೆದುಕೊಂಡು ಠಾಣೆಗೆ ಬಂದೆ, ನಾವು ಪಂಚರು ಹಾಗೂ ಮಕ್ಕಳ

ರಕ್ಷಣಾಧಿಕಾರಿ ಸ್ಪಂದನಾ ಸಂಸ್ಥೆಯ ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಹೊಳೆ ನಾಗಲಾಪೂರ ಗ್ರಾಮದ ಗಾಂವಕಾನದ ಜನತಾ ಪ್ಲಾಟನಲಿಲರುವ ಆರೋಪಿ-1 ಇವರ ಮನೆಗೆ ಹೋದೆವು. ಮನೆಯ ಸ್ವಲ್ಪ ದೂರದಲ್ಲಿ ನಿಂತು ಫ್ರಾಸಾ.1, ಚಾಸಾ.14 ಮತ್ತು ಮಹಿಳಾ ರಕ್ಷಣಾಧಿಕಾರಿಗಳಿಗೆ ಒಳಗೆ ಹೋಗಿ ಪರಿಶೀಲಿಸುವಂತೆ ಕೈ ಸನ್ನೆ ಮಾಡಿ ತಿಳಿಸಿದರು. ಅದರಂತೆ ಅವರು ಆರೋಪಿ-1 ರ ಮನೆಯಲ್ಲಿ ಹೋಗಿ ಪರಿಶೀಲನೆ ಮಾಡಿ ಖಚಿತಪಡಿಸಿಕೊಂಡು ನಮ್ಮನ್ನು ಕರೆದರು. ಆಗ ಸುಮಾರು 11.45 ಗಂಟೆ ಆಗಿತ್ತು. ನಂತರ ಮನೆಯ ಒಳಗೆ ಹೋಗಿ ಫ್ರಾಸಾ.1 ಆರೋಪಿ-1 ಇವರಿಗೆ ನಮ್ಮನ್ನು ಪರಿಚಯಿಸಿ ಅಲ್ಲಿ ಫ್ರಾಸಾ-3, 7 ಅಪ್ರಾಪ್ತ ವಯಸ್ಸಿನ ಬಾಲಕಿಯರಿದ್ದರು ಅವರನ್ನು ಫ್ರಾಸಾ.1 ಹಾಗೂ ಇತರೇ ಅಧಿಕಾರಿಗಳು ವಿಚಾರಿಸಿದಾಗ ಫ್ರಾಸಾ.7 ತನ್ನನ್ನು ಆರೋಪಿತರು ಮಾರಾಟ ಮಾಡಲು ರಾಜಸ್ಥಾನಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ವ್ಯಾಪಾರ ಕುದುರದ ಕಾರಣ ವಾಪಸ್ಸು ಕರೆದುಕೊಂಡು ಬಂದು ಮಾರಾಟ ಮಾಡಲು ತಂದು ಇಟ್ಟಿರುತ್ತಾರೆ ಅಂತಾ ಹೇಳಿದಳು. ಫ್ರಾಸಾ.3 ರವನ್ನು ವಿಚಾರಿಸಲಾಗಿ ಆರೋಪಿ-3 ಮಾರಾಟ ಮಾಡಲು ತಂದಿರುತ್ತಾರೆ ಅಂತಾ ಹೇಳಿದಳು. ಆರೋಪಿ-4, 5 ರವರನು ಫ್ರಾಸಾ.7 ರವರನ್ನು ಮಾರಾಟ ಮಾಡಲು ತಂದಿರುತ್ತಾರೆ ಎಂದು ಹೇಳಿದಳು ಮತ್ತು ತಮ್ಮನ್ನು ಕೂಡಿಹಾಕಿರುತ್ತಾರೆ ಅಂತಾ ತಿಳಿಸಿದರು ಅಂತಾ ನುಡಿದಿರುತ್ತಾರೆ. ಈ ಸಾಕ್ಷಿಯ ಸಾಕ್ಷವನ್ನು ಪರಿಶೀಲಿಸಲಾಗಿ ಆರೋಪಿ 1 ರಿಂದ 3 ರವರು ನೊಂದ ಬಾಲಕಿಯರನ್ನು ವೇಶ್ಯಾವಾಟಿಕೆಗಾಗಿ ಮಾರಾಟ ಮಾಡಲು ಒಂದು ಭಾರಿ ಗುಜರಾತಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವ್ಯಾಪಾರ ಹೊಂದದೆ ಇದ್ದುದರಿಂದ ಪುನಃ 1ನೇ ಆರೋಪಿತನ ಮನೆಗೆ ಕರೆದುಕೊಂಡು ಅಲ್ಲಿ ಅಕ್ರಮವಾಗಿ ಬಂಧನದಲ್ಲಿಟ್ಟಿದ್ದರ ಬಗ್ಗೆ ಸದರಿ

ಸಾಕ್ಷಿಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ಸಾಕ್ಷಿದಾರರನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲು ಮಾಡಿದರೂ ಸಹಿತ ಆ ದಿವಸ ಪೊಲೀಸರು ದಾಳಿ ಮಾಡಿಲ್ಲ, 1 ನೇ ಆರೋಪಿತನ ಮನೆಯಲ್ಲಿ ನೊಂದ ಬಾಲಕಿಯರು ಸಿಕ್ಕಿರುವುದಿಲ್ಲ. 2 ಮತ್ತು 3 ನೇ ಆರೋಪಿತರೊಂದಿಗೆ ಸೇರಿಕೊಂಡು ನೊಂದ ಬಾಲಕಿಯರು ಅಪ್ರಾಪ್ತ ವಯಸ್ಸಿನವರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರಂತಾ ಗೊತ್ತಿದ್ದರೂ ಸಹಿತ ನೊಂದ ಬಾಲಕಿಯರನ್ನು ಅಕ್ರಮ ಬಂಧನದಲ್ಲಿಟ್ಟು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಪಟ್ಟಿರುವುದಿಲ್ಲ ಎಂಬುದರ ಬಗ್ಗೆ ಎಲ್ಲಿಯೂ ಸಹಿತ ಪಾಟೀ ಸವಾಲಿನಿಂದ ಹೊರ ಬಂದಿರುವುದಿಲ್ಲ.

20. ಆರೋಪಿಗಳ ಪರ ವಕೀಲರ ಮುಖ್ಯ ವಾದ ಈ ಕೇಸಿನ ಪ್ರಮುಖ ಸಾಕ್ಷಿದಾರರು ನಿ.ಪಿ.1 ಮಹಜರ್ ಸಾಕ್ಷಿ ಚಾಸಾ.3/ಪ್ರಾಸಾ.2, ಚಾಸಾ.2/ಪ್ರಾಸಾ.4 ಹಾಗೂ ನಿ.ಪಿ.6 ರ ಮಹಜರ್ ಸಾಕ್ಷಿ ಚಾಸಾ.5/ಪ್ರಾಸಾ.5, ಚಾಸಾ.4/ಪ್ರಾಸಾ.6, ಪ್ರತ್ಯಕ್ಷ ಸಾಕ್ಷಿಗಳಾದ ಚಾಸಾ.10/ಪ್ರಾಸಾ.9, ಆರೋಪಿತರಿಗೆ ಬಾಡಿಗೆಗಾಗಿ ಮನೆಯನ್ನು ಕೊಟ್ಟಂತರ ಚಾಸಾ.16, 17, ಪ್ರಾಸಾ.11, 12 ರವರು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಕೇವಲ ಪೊಲೀಸ್ ಅಧಿಕಾರಿಗಳು ಮಾತ್ರ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುವುದರಿಂದ ಸದರಿಯವರ ಸಾಕ್ಷ್ಯವನ್ನು ನ್ಯಾಯಾಲಯವು ಪರಿಗಣಿಸಲು ಬರಲಾರದು ಅಂತಾ ಮಾಡಿದಂತಹ ವಾದವನ್ನು ಪರಿಶೀಲಿಸಲಾಗಿ ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯ 2012 ಕ್ರಿ.ಲಾ.ಜ. 672 ಸಿ.ರೋನಾಲ್ಡ ಮತ್ತು ಇತರರು ವಿರುದ್ಧ ಉತ್ತರಪ್ರದೇಶ ರಾಜ್ಯ, ಈ ತೀರ್ಪನ್ನು ಪರಿಶೀಲಿಸಲಾಗಿ ಕೇವಲ ಪೊಲೀಸರು ಅಧಿಕಾರಿಗಳು ಇರುತ್ತಾರೆ ಎಂಬ ಆಧಾರದ ಮೇಲೆ ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ತಿರಸ್ಕರಿಸಲು ಬರಲಾರದು, ಪೊಲೀಸ್ ಅಧಿಕಾರಿಗಳಿಗೂ ಆರೋಪಿತರಿಗೂ

ಯಾವುದೇ ವೈರತ್ವ ಇರುವುದಿಲ್ಲ. ಆದ್ದರಿಂದ ಪೊಲೀಸರು ಅಧಿಕಾರಿಗಳು ನೀಡಿದಂತಹ ಸಾಕ್ಷ್ಯವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಸದರಿ ಸಾಕ್ಷಿದಾರರು ನುಡಿದಂತಹ ಸಾಕ್ಷ್ಯ ನ್ಯಾಯಸಮ್ಮತವಾಗಿರುತ್ತದೆ ಅಂತಾ ನ್ಯಾಯಾಲಯಕ್ಕೆ ಕಂಡುಬಂದಾಗ ಅಂತಹ ಸಂದರ್ಭದಲ್ಲಿ ಸದರಿಯವರ ಸಾಕ್ಷ್ಯವನ್ನು ನ್ಯಾಯಾಲಯವು ಪರಿಗಣಿಸಬೇಕಾಗುತ್ತದೆ ಅಂತಾ ಸ್ಪಷ್ಟವಾದ ತೀರ್ಪು ಇರುತ್ತದೆ. ಈ ತೀರ್ಪು ಈ ಕೇಸಿಗೆ ಪರಿಶೀಲಿಸಲಾಗಿ ಫ್ರಾಸಾ.1 ಮತ್ತು 10 ಪಿ.ಎಸ್.ಐ ಮತ್ತು ಮುಖ್ಯ ಆರಕ್ಷಕರು ದಾಳಿ ಮಾಡಿ ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು, ಸಾಕ್ಷಿದಾರರ ಸಮ್ಮುಖದಲ್ಲಿ ಆರೋಪಿ 1 ರಿಂದ 3 ಹಾಗೂ ನೊಂದ ಬಾಲಕಿಯರ ಸಮೇತ ಸಿಕ್ಕಿದ್ದು ಇದಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ಮಾಡಿ, ಆರೋಪಿತರನ್ನು ವಿಚಾರಣೆ ಮಾಡಿ, ನೊಂದ ಬಾಲಕಿಯರನ್ನು ವಿಚಾರ ಮಾಡಿ ಆರೋಪಿ 1 ರಿಂದ 3 ರವರು ನೊಂದ ಬಾಲಕಿಯರನ್ನು ಗುಜರಾತಿಗೆ ಮಾರಾಟ ಮಾಡುವ ಅಥವಾ ಅವರ ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಿಸುವ ಉದ್ದೇಶದಿಂದ ಅಥವಾ ವೇಶ್ಯಾವಾಟಿಕೆಗಾಗಿ ಗುಜರಾತಿಗೆ ಮಾರಾಟ ಮಾಡುವ ಉದ್ದೇಶದಿಂದ ಅಪಹರಿಸಿ ಅಕ್ರಮ ಬಂಧನದಲ್ಲಿಟ್ಟಿದ್ದರು ಅಂತಾ ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಆದ್ದರಿಂದ ಆರೋಪಿಗಳ ಪರ ವಕೀಲರ ವಾದ ನ್ಯಾಯಸಮ್ಮತವಾಗಿರುವುದಿಲ್ಲ.

21. ಪ್ರತ್ಯಕ್ಷ ಸಾಕ್ಷಿಗಳು:- ಚಾಸಾ.9/ಫ್ರಾಸಾ.8 ವಿ. ಸುಶೀಲಾ, ಸ್ಪಂದನಾ ಸಂಸ್ಥೆ ಬೆಳಗಾವಿ ಇದರ ಕಾರ್ಯದರ್ಶಿಗಳು ಮತ್ತು ಫ್ರಾಸಾ.20/ಚಾಸಾ.8 ಅರುಣ ಮಧುರ ನೀರಗಟ್ಟಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಆಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 05-10-2015 ರಂದು ಮುಂಜಾನೆ 9.30 ಗಂಟೆಗೆ ಚಾಸಾ-8 ಪೋನ ಮಾಡಿ ಕಿತ್ತೂರ ಪೋಲಿಸ ಠಾಣೆಯಿಂದ ಪಿಎಸಐ

ಫೋನ ಮಾಡಿ ಇಬ್ಬರು ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಮಾರಾಟ ಮಾಡುತ್ತಿದ್ದಾರೆ ನೀವು ಠಾಣೆಗೆ ಬರಬೇಕು ಅಂತಾ ತಿಳಿಸಿದ್ದರಿಂದ ತಾವು ಕಿತ್ತೂರ ಪೋಲಿಸ ಠಾಣೆಗೆ ಹೋದೆ. 10.30 ಗಂಟೆಗೆ ನಾವು ಠಾಣೆಯಿಂದ ಪಿಎಸಐ, ಅವರ ಸಿಬ್ಬಂದಿ ಹಾಗೂ ನಾವು ಅವರ ಜೀಪಿನಲ್ಲಿ ಹೊಳೆ ನಾಗಲಾಪುರ ಗ್ರಾಮಕ್ಕೆ 11.00 ಗಂಟೆಗೆ ಹೋಗಿರುತ್ತೇವೆ. ನಮಗೆ ಕಿತ್ತೂರ ಪಿಎಸಐ ರವರು ಮುಂದೆ ಹೋಗಿ ವಿಷಯ ಖಚಿತಪಡಿಸಿಕೊಳ್ಳಿ ಅಂತಾ ತಿಳಿಸಿರುತ್ತಾರೆ. ನಾವು ಆರೋಪಿ-1 ರ ಮನೆಗೆ ಹೋಗಿದ್ದು ಅಲ್ಲಿ ಮದುವೆ ಕುರಿತು ಹುಡುಗಿಯರು ಬೇಕಾಗಿದ್ದಾರೆ ಎಂದು ಕೇಳಿದೆವು. ಫ್ರಾಸಾ-3 ಮತ್ತು 7 ರನ್ನು ಆರೋಪಿ-1 ನಮಗೆ ತೋರಿಸಿರುತ್ತಾರೆ. ಚಾಸಾ-8 ರಿಗೆ ಅನುಮಾನ ಬಂತು. ನಂತರ ನಾವು ಪಿಎಸಐ ರವರಿಗೆ ವಿಷಯ ತಿಳಿಸಿರುತ್ತೇವೆ. ಆರೋಪಿ-1 ಮಂಜುಳಾ ಎಂಬ ಹುಡುಗಿಯನ್ನು ಗುಜರಾತಗೆ ಈ ಮುಂಚೆ ಕರೆದುಕೊಂಡು ಹೋಗಿದ್ದು ಹಣದ ವ್ಯವಹಾರ ಕುದುರದ ಕಾರಣ ವಾಪಸ್ಸು ಬಂದಿರುವದಾಗಿ ಹೇಳಿರುತ್ತಾರೆ. ಫ್ರಾಸಾ-3 ಮತ್ತು 7 ರವರನ್ನು ಗುಜರಾತಗೆ ಕರೆದುಕೊಂಡು ಹೋಗುವ ಬಗ್ಗೆ ತಿಳಿಯಿತು. ಎಲ್ಲ ಆರೋಪಿತರು ಸೇರಿಕೊಂಡು ಫ್ರಾಸಾ-3 ಮತ್ತು 7 ರನ್ನು ಮದುವೆ ಕುರಿತು ಮಾರಾಟ ಮಾಡುವ ಉದ್ದೇಶದಿಂದ ಅಲ್ಲಿ ಕೂಡಿಟ್ಟ ಬಗ್ಗೆ ತಮಗೆ ಗೊತ್ತಾಯಿತು ಅಂತಾ ಸಾಕ್ಷಿ ನುಡಿದಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿ ಈ ಸಾಕ್ಷಿಯು ನುಡಿದ ಸಾಕ್ಷ್ಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಫ್ರಾಸಾ.1 ರವರು ಈ ಸಾಕ್ಷಿದಾರರನ್ನು ಆರೋಪಿತರ ಮನೆಗೆ ಕರೆದುಕೊಂಡು ಹೋಗಿದ್ದು, 1 ನೇ ಆರೋಪಿಯ ಮನೆಯಲ್ಲಿ ನೊಂದ ಬಾಲಕಿಯರು ಸಿಕ್ಕಿದ್ದು, ಅವರನ್ನು ಈ ಸಾಕ್ಷಿದಾರರ ವಿಚಾರ ಮಾಡಿದಾಗ ನಮ್ಮನ್ನು ಗುಜರಾತಿಗೆ ಮಾರಾಟ ಮಾಡಲು ಕರೆದುಕೊಂಡು ಹೋಗಿದ್ದು, ಅಲ್ಲಿ ವ್ಯವಹಾರ ಕುದುರದ ಕಾರಣ ಮತ್ತೆ ತಮ್ಮನ್ನು

ಕರೆದುಕೊಂಡು ಬಂದಿರುತ್ತಾರೆ. ಮಾರಾಟ ಮಾಡುವ ಸಲುವಾಗಿ ಅಕ್ರಮ ಬಂಧನದಲ್ಲಿಟ್ಟಿದ್ದರೆಂಬ ಬಗ್ಗೆ ಸಾಕ್ಷಿ ಸಾಕ್ಷಿದಾರರ ಸಾಕ್ಷ್ಯದಿಂದ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಈ ಸಾಕ್ಷಿಗಳನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲು ಮಾಡಿದರೂ ಸಹಿತ ಸದರಿ ಆರೋಪಿ 1 ಇವರ ಮನೆಯಲ್ಲಿ ನೊಂದ ಬಾಲಕಿಯರು ಸಿಕ್ಕಿರುವುದಿಲ್ಲ ಅಂತಾ ಎಲ್ಲೂ ಸಹಿತ ಪಾಟೀ ಸವಾಲಿನಿಂದ ಹೊರ ಬಂದಿರುವುದಿಲ್ಲ. ಆದ್ದರಿಂದ ಈ ಸಾಕ್ಷಿಗಳು ಪೊಲೀಸರು ಅಧಿಕಾರಿಗಳು ಆಗಿರುವುದಿಲ್ಲ. ಸದರಿ ಸಾಕ್ಷಿದಾರರ ಸ್ಪಂದನಾ ಸಂಸ್ಥೆಯ ಕಾರ್ಯದರ್ಶಿ ಮತ್ತು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಯಾಗಿದ್ದು ಈ ಸಾಕ್ಷಿದಾರರ ಸಾಕ್ಷ್ಯವನ್ನು ನ್ಯಾಯಾಲಯವು ಸರ್ಮಪಕವಾಗಿ, ನ್ಯಾಯಸಮ್ಮತವಾಗಿ, ನೈಜದಿಂದ ಕೂಡಿರುತ್ತದೆ ಅಂತಾ ನ್ಯಾಯಾಲಯವು ಪರಿಗಣಿಸಲಾಗಿರುತ್ತದೆ. ಈ ಸಾಕ್ಷಿಗಳ ಪ್ರಕಾರ ಆರೋಪಿತರು ನೊಂದ ಬಾಲಕಿಯರನ್ನು ಅಕ್ರಮವಾಗಿ ಬಂಧನದಲ್ಲಿಟ್ಟು ಅವರನ್ನು ಮಾರಾಟ ಮಾಡುವ ಅಥವಾ ವೇಶ್ಯಾವಾಟಿಕೆಗೆ ತೊಡಗಿಸುವ ಸಲುವಾಗಿ ಇಟ್ಟುಕೊಂಡಿರುತ್ತಾರೆ ಅಂತಾ ಸ್ಪಷ್ಟವಾಗಿ ಸದರಿ ಸಾಕ್ಷಿದಾರರ ಮುಖಾಂತರ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

22. ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಅಕ್ರಮ ಬಂಧನದಲ್ಲಿಟ್ಟು ಮಾರಾಟ ಅಥವಾ ವೇಶ್ಯಾವಾಟಿಕೆಗೆ ತೊಡಿಗಿಸುವ ಉದ್ದೇಶವನ್ನು ಹೊಂದಿರುತ್ತಾರೆ ಅಂತಾ ಸಾಕ್ಷಿಗಳ ಮುಖಾಂತರ ರುಜುವಾತು ಆದಾಗ ಇಂತಹ ಸಂದರ್ಭದಲ್ಲಿ ಆರೋಪಿತರಿಗೆ ಶಿಕ್ಷೆ ನೀಡಲು ಬರುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ನ್ಯಾಯಾಲಯವು ಪರಿಗಣಿಸಬೇಕಾಗಿದ್ದರಿಂದ ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೊಚ್ಛ ನ್ಯಾಯಾಲಯ 2010 ಕ್ರಿ.ಲಾ.ಜ. 4729 ಮಂಜಪ್ಪ ವಿರುದ್ಧ ಕರ್ನಾಟಕ ರಾಜ್ಯ, ಈ ತೀರ್ಪನ್ನು ಪರಿಶೀಲಿಸಲಾಗಿ ಭಾ.ದಂ.ಸಂ.ಕಲಂ 366(ಎ), 372, 373 ರಡಿಯಲ್ಲಿ ಪ್ರಕರಣ ದಾಖಲಾಗಿದ್ದು,

ಜಿಲ್ಲಾ ನ್ಯಾಯಾಲಯವು ಸಾಕ್ಷಿ, ದಾಖಲೆಗಳನ್ನು ಪರಿಶೀಲಿಸಿ ಆರೋಪಿತರಿಗೆ ಶಿಕ್ಷೆ ವಿಧಿಸಿದ್ದು, ನಂತರ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಾಗ ಸದರಿ ಮೇಲ್ಮನವಿಯು ಸಹಿತ ವಜಾ ಆಗಿದ್ದು, ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ ತೀರ್ಪಿನ ಪ್ಯಾರಾ 4, 5 ರಲ್ಲಿ 18 ವರ್ಷ ವಯಸ್ಸಿನ ಒಳಗಿನ ಬಾಲಕಿಯರಾಗಿದ್ದು, ಅಕ್ರಮವಾಗಿ ಬಂಧನದಲ್ಲಿಟ್ಟಿದ್ದು ಮತ್ತು ಅವರನ್ನು ಮುಂಬೈಗೆ ಮಾರಾಟ ಮಾಡಿದ್ದು ಅದರ ಬಗ್ಗೆ ಸಾಕ್ಷಿದಾರರ ಸಾಕ್ಷ್ಯವನ್ನು ಕುಲಂಕುಶವಾಗಿ ಪರಿಶೀಲಿಸಿದಾಗ ಆರೋಪಿತರು ಅಪರಾಧ ಮಾಡಿರುತ್ತಾರೆ ಅಂತಾ ಸ್ಪಷ್ಟವಾಗಿ ಕಂಡುಬಂದಿರುತ್ತದೆ ಅಂತಾ ಪರಿಗಣಿಸಿ ಮೇಲ್ಮನವಿಯನ್ನು ಸಹಿತ ವಜಾ ಮಾಡಿದ್ದರ ಬಗ್ಗೆ ತೀರ್ಪಿನಲ್ಲಿ ತಿಳಿಸಿರುತ್ತಾರೆ. ಈ ತೀರ್ಪು ಈ ಕೇಸಿಗೆ ಪರಿಶೀಲಿಸಲಾಗಿ ಫ್ರಾಸಾ.3/ಚಾಸಾ.7 ನೊಂದ ಬಾಲಕಿ ಜನನ ದಿನಾಂಕಃ 1.6.1997 ಇದ್ದು, ಫ್ರಾಸಾ.8/ಚಾಸಾ.9 ನೊಂದ ಬಾಲಕಿಯ ಜನನ ದಿನಾಂಕಃ 7.6.2002 ಇದ್ದು, ಘಟನಾ ದಿವಸಕ್ಕೆ 13 ವರ್ಷ 8 ತಿಂಗಳು ಆಗುತ್ತದೆ. ಈ ಅಂಶವನ್ನು ಪರಿಶೀಲಿಸಲಾಗಿ ಘಟನೆ ಆಗುವ ಸಮಯಕ್ಕೆ ನೊಂದ ಬಾಲಕಿಯರು 18 ವರ್ಷ ವಯಸ್ಸಿನ ಒಳಗಡೆ ಇದ್ದು, ಸದರಿಯವರು ಅಲ್ಪ ವಯಸ್ಕರಾಗಿದ್ದು ಪರಿಶಿಷ್ಟ ಜಾತಿಗೆ ಸೇರಿದ್ದು, ಸದರಿಯವರನ್ನು ಅಕ್ರಮ ಬಂಧನದಲ್ಲಿಟ್ಟಿದ್ದರಿಂದ ಸದರಿ ತೀರ್ಪಿನ ಪ್ರಕಾರ ಆರೋಪಿತರು ಅಪರಾಧ ಮಾಡಿರುತ್ತಾರೆ ಅಂತಾ ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಕಂಡುಬಂದಿರುತ್ತದೆ.

23. ಫೋಟೋಗ್ರಾಫರ್ ಬಗ್ಗೆಃ- ಫ್ರಾಸಾ.13/ಚಾಸಾ.20 ಮಹಾಂತೇಶ ಮಡಿವಾಳಪ್ಪ ಸುಬೇದಾರ, ಫೋಟೋಗ್ರಾಫರ ಆಗಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 5.10.2015 ರಂದು ಪೊಲೀಸರು ತನ್ನನ್ನು ಠಾಣೆಗೆ

ಕರೆದು ಹೊಳೆನಾಗಲಾಪೂರಕ್ಕೆ ಪೋಟೋ ತೆಗೆಯಲು ಕರೆದುಕೊಂಡು ಹೋಗಿದ್ದು ಅಲ್ಲಿ ನಿ.ಪಿ.3 ರಂತೆ ಪೋಟೋ ತೆಗೆದಿರುತ್ತೇನೆ ಅಂತಾ ಸಾಕ್ಷಿ ನುಡಿದಿರುತ್ತಾರೆ. ಸದರಿ ಪೋಟೋದಲ್ಲಿ ಆರೋಪಿ 1 ರಿಂದ 3 ಮತ್ತು ಪಂಚರು ಇದ್ದ ಬಗ್ಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ಸಾಕ್ಷಿಯನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲು ಮಾಡಿದರೂ ಸಹಿತ ಆ ದಿವಸ ಪೊಲೀಸರು ಈ ಸಾಕ್ಷಿಯನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಸ್ಥಳದಲ್ಲಿ ನಿ.ಪಿ.3 ಪೋಟೋ ತೆಗೆದಿರುವುದಿಲ್ಲ ಎಂಬುದರ ಬಗ್ಗೆ ಎಲ್ಲೂ ಸಹಿತ ಪಾಟೀ ಸವಾಲಿನಿಂದ ಹೊರ ಬಂದಿರುವುದಿಲ್ಲ. ಸದರಿ ಪೋಟೋದಲ್ಲಿ ನೊಂದ ಬಾಲಕಿಯರ ಭಾವಚಿತ್ರ ಇರುವುದಿಲ್ಲ ಅಂತಾ ಆರೋಪಿಗಳ ಪರ ವಕೀಲರ ವಾದವನ್ನು ಪರಿಶೀಲಿಸಲಾಗಿ ನೊಂದ ಬಾಲಕಿಯರ ಭಾವಚಿತ್ರ, ಹೆಸರು ಜಾಹೀರಾತು, ದಿನಪತ್ರಿಕೆ, ಮಾಧ್ಯಮಗಳಲ್ಲಿ ಪ್ರಕಟಿಸಬಾರದು ಅಂತಾ The indecent representation and women (prohibited) Act 1986 Sec 4 and JJ Act Sec 21 ಕಾನೂನು ಇರುತ್ತದೆ. ಆದ್ದರಿಂದ ಸದರಿ ನೊಂದ ಬಾಲಕಿಯರ ಭಾವಚಿತ್ರ ನಿ.ಪಿ.3 ರಲ್ಲಿ ಇರುವುದಿಲ್ಲ. ಆದ್ದರಿಂದ ನಿ.ಪಿ.3 ಪೋಟೋದ ಪ್ರಕರವು ಸಹಿತ ಆರೋಪಿ 1 ರಿಂದ 3 ರವರು ನೊಂದ ಬಾಲಕಿಯನ್ನು ಅಪಹರಿಸಿಕೊಂಡು ಗುಜರಾತಿಗೆ ಮಾರಾಟ ಮಾಡಲು ಪ್ರಯತ್ನಪಟ್ಟಿದ್ದರು ಅಂತಾ ಸದರಿ ಸಾಕ್ಷಿದಾರರ ಮುಖಾಂತರ ರುಜುವಾತು ಆಗಿರುತ್ತದೆ.

24. ನಿ.ಪಿ.1 ಮಹಜರ್ ಬಗ್ಗೆ:- ಆರೋಪಿಗಳ ಪರ ವಕೀಲರು ವಾದ ಮಾಡುತ್ತಾ ಫ್ರಾಸಾ.2 ಮತ್ತು ಫ್ರಾಸಾ.4 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ನಿ.ಪಿ.1 ಮಹಜರ್ ರುಜುವಾತು ಆಗಿರುವುದಿಲ್ಲ ಅಂತಾ ಆರೋಪಿಗಳ ಪರ ವಕೀಲರ ವಾದವನ್ನು ಪರಿಶೀಲಿಸಲಾಗಿ ನಿ.ಪಿ.1 ಮಹಜರ್ ರುಜುವಾತುಪಡಿಸಲು

ಫ್ರಾಸಾ.1 ಪಿಎಸ್ಐ/ದೂರುದಾರ, ಫ್ರಾಸಾ.9, 20 ಪ್ರತ್ಯಕ್ಷ ಸಾಕ್ಷಿದಾರರು ನಿ.ಪಿ.1 ಮಹಜರನಲ್ಲಿ ರುಜು ಮಾಡಿದ್ದು, ಸದರಿಯವರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಇಂತಹ ಸಂದರ್ಭದಲ್ಲಿ ಮಹಜರ್ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದಿದ್ದರೂ ಸಹಿತ ತನಿಖಾಧಿಕಾರಿಗಳ ಮುಖಾಂತರ ಮಹಜರನ್ನು ರುಜುವಾತುಪಡಿಸಬಹುದು ಅಂತಾ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಐಎಲ್ಆರ್ 2001 ಕರ್ನಾಟಕ 4655 ಕರ್ನಾಟಕ ರಾಜ್ಯ ಹಾಸನ ಪೊಲೀಸ್ ಠಾಣೆ ವಿರುದ್ಧ ಲೋಕೇಶ ಮತ್ತು ಇತರರು (ದ್ವಿಸದಸ್ಯ ಪೀಠ) ತೀರ್ಪಿನಲ್ಲಿ ತಿಳಿಸಿರುತ್ತಾರೆ. ಈ ತೀರ್ಪಿನ ಪ್ರಕಾರ ನಿ.ಪಿ.1 ಮಹಜರನ್ನು 1 ನೇ ಆರೋಪಿತನ ಮನೆಯಲ್ಲಿ ಮಾಡಿದ್ದ ಬಗ್ಗೆ ಫ್ರಾಸಾ.1, 8 ಮತ್ತು 20 ರವರ ಮುಖಾಂತರ ರುಜುವಾತುಪಡಿಸಿರುತ್ತಾರೆ. ಆದ್ದರಿಂದ ನಿ.ಪಿ.1 ಮಹಜರ್ ರುಜುವಾತು ಆಗಿರುವುದಿಲ್ಲ ಅಂತಾ ಆರೋಪಿಗಳ ಪರ ವಕೀಲರ ವಾದ ನ್ಯಾಯಸಮ್ಮತವಾಗಿರುವುದಿಲ್ಲ.

25. ನೊಂದ ಬಾಲಕಿಯರು ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರಡಿಯಲ್ಲಿ ಕೊಟ್ಟಂತಹ ಹೇಳಿಕೆಗಳ ಬಗ್ಗೆ:- ಆರೋಪಿಗಳ ಪರ ವಕೀಲರು ವಾದ ಮಾಡುತ್ತಾ ನೊಂದ ಬಾಲಕಿಯರಾದ ಫ್ರಾಸಾ.3 ಮತ್ತು 7 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ ಅಂತಾ ವಾದ ಮಾಡಿದ್ದನ್ನು ಪರಿಶೀಲಿಸಲಾಗಿ ನೊಂದ ಬಾಲಕಿಯರು ಪ್ರತಿಕೂಲ ಸಾಕ್ಷಿ ನುಡಿದು ನಿ.ಪಿ.3 ಮತ್ತು 7 ರಂತೆ ಹೇಳಿಕೆ ನೀಡಿರುವುದಿಲ್ಲ ಅಂತಾ ಸಾಕ್ಷಿ ನುಡಿದಿದ್ದು, ಇಂತಹ ಸಂದರ್ಭದಲ್ಲಿ ಪೊಲೀಸರು ಪಡೆದುಕೊಂಡಂತಹ ದಂ.ಪ್ರ.ಸಂ.ಕಲಂ 161 ರ ಹೇಳಿಕೆಯನ್ನು ನ್ಯಾಯಾಲಯವು ಯಾವ ರೀತಿ ಪರಿಗಣಿಸಬೇಕು ಎಂಬುದರ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯ 2014 (4) ಕೆಸಿಸಿಆರ್ (ಎಸ್.ಎನ್) ಪುಟ 441

(ಎಸ್.ಸಿ) Ashok Debburum @ Achak Debburum V/s State of Tripura, ಈ ತೀರ್ಪನ್ನು ಪರಿಶೀಲಿಸಲಾಗಿ ದಂ.ಪ್ರ.ಸಂ.ಕಲಂ 161 ಹೇಳಿಕೆಯನ್ನು ತನಿಖಾ ಸಮಯದಲ್ಲಿ ಕೊಟ್ಟಂತಹ ಹೇಳಿಕೆ ಆಗಿದ್ದು, ಈ ಹೇಳಿಕೆಯನ್ನು ಕೇವಲ ವಿರೋಧಾಭಾಸ (contradiction) ಅಂತಾ ಪರಿಗಣಿಸಬೇಕೇ ವಿನಃ ಪುಷ್ಟೀಕರಣ ಅಥವಾ ಸಮರ್ಥನೆ (corroboration) ಸಾಕ್ಷಿ ಅಂತಾ ಪರಿಗಣಿಸಲು ಬರಲಾರದು ಅಂತಾ ತೀರ್ಪಿನಲ್ಲಿ ತಿಳಿಸಿರುತ್ತಾರೆ. ಸದರಿ ತೀರ್ಪು ಈ ಕೇಸಿಗೆ ಪರಿಶೀಲಿಸಲಾಗಿ ನೊಂದ ಬಾಲಕಿಯರು ತನಿಖಾಧಿಕಾರಿಗಳ ಮುಂದೆ ಕೊಟ್ಟಂತಹ ನಿ.ಪಿ.3 ಮತ್ತು 7 ಹೇಳಿಕೆಗಳನ್ನು ಅಲ್ಲಗಳೆದಿದ್ದರಿಂದ ಈ ಒಂದು ಆಧಾರದ ಮೇಲೆ ನೊಂದ ಬಾಲಕಿಯರು ಮ್ಯಾಜಿಸ್ಟ್ರೇರವರ ಮುಂದೆ ಕೊಟ್ಟಂತಹ ದಂ.ಪ್ರ.ಸಂ.ಕಲಂ 164 ರಡಿಯಲ್ಲಿ ಕೊಟ್ಟಂತಹ ಹೇಳಿಕೆಗಳನ್ನು ತಿರಸ್ಕರಿಸಲು ಬರಲಾರದು. ಆದ್ದರಿಂದ ಆರೋಪಿಗಳ ಪರ ವಕೀಲರ ವಾದ ನ್ಯಾಯ ಸಮ್ಮತವಾಗಿರುವುದಿಲ್ಲ.

26. ಹಾಗಾದರೆ ಸ್ಥಳೀಯ ಮ್ಯಾಜಿಸ್ಟ್ರೇಟರವರ ಮುಂದೆ ಫ್ರಾಸಾ.3 ಇವಳು ನಿ.ಪಿ.25 ರಂತೆ ಹೇಳಿಕೆ ಕೊಟ್ಟಿದ್ದು, ಸದರಿ ಹೇಳಿಕೆಯನ್ನು ಪರಿಶೀಲಿಸಲಾಗಿ ನನ್ನ ಊರು ಅಲತಗಾ. ನಾನು ಗಣೇಶ ಹಬ್ಬಕ್ಕೆಂದು ನನ್ನ ಅತ್ತಿಗೆ ಚನ್ನಮಾರವರ ಊರಿಗೆ ಅಂದರೆ ಬಸ್ತವಾಡಕ್ಕೆ ಹೋಗಿದ್ದೆ. ಅಲ್ಲಿ ನನ್ನ ಅತ್ತಿಗೆಯ ಪರಿಚಯಸ್ಥರಾದ ಸಂದೀಪ ಎಂಬುವರು ನನ್ನ ಅತ್ತಿಗೆಗೆ ನನ್ನನ್ನು ಹುಬ್ಬಳಿಗೆ ತನ್ನ ಚಿಕ್ಕಮ್ಮಳ ಮಗಳ ಹುಟ್ಟು ಹಬ್ಬ ಇದೆ ಎಂದು ಹೇಳಿ ನನ್ನನ್ನು ಹೊಳೆನಾಗಲಾಪೂರಕ್ಕೆ ಮಂಜವ್ವ (1 ನೇ ಆರೋಪಿ) ಎಂಬುವರ ಮನೆಗೆ ಕರೆದುಕೊಂಡು ಹೋದರೆ ಆದರೆ ಆತ ಹೇಳಿದಂತೆ ನನ್ನನ್ನು ಹುಬ್ಬಳ್ಳಿಗೆ ಕರೆದುಕೊಂಡು ಹೋಗಲಿಲ್ಲ. ಮಂಜವ್ವ (1 ನೇ ಆರೋಪಿ) ಇವರ

ಮನೆಯಲ್ಲಿ ನಾನು ಒಂದು ಗಂಟೆ ಕಾಲ ಕುಳಿತಿದ್ದೆ. ಆಗ ರೂಪಾ (ನೊಂದ ಬಾಲಕಿ ಫ್ರಾಸಾ.7) ಎಂಬ ಹುಡುಗಿ ಅಲ್ಲಿಗೆ ಬಂದಳು ಆಕೆಯು ಸಹ ಮಂಜಮ್ಮಳ ಮನೆಯಲ್ಲಿ ಕುಳಿತ್ತಿದ್ದಳು ಅಂತಾ ಹೇಳಿಕೆ ಕೊಟ್ಟಿರುತ್ತಾಳೆ. ಈ ಅಂಶವನ್ನು ಪರಿಶೀಲಿಸಲಾಗಿ ಸದರಿ ನೊಂದ ಬಾಲಕಿಗೆ ಹುಟ್ಟುಹಬ್ಬ ಇದೆ ಅಂತಾ ಹೇಳಿ ಹೊಳೆನಾಗಲಾಪೂರಕ್ಕೆ ಕರೆದುಕೊಂಡು ಹೋಗಿ 1 ನೇ ಆರೋಪಿಯ ಮನೆಯಲ್ಲಿ ಇಟ್ಟಿದ್ದು, ನಂತರ ಅಲ್ಲಿ ಫ್ರಾಸಾ.7 ನೊಂದ ಬಾಲಕಿಯನ್ನು ಕರೆಸಿಕೊಂಡಿದ್ದರ ಬಗ್ಗೆ ಹೇಳಿಕೆ ಕೊಟ್ಟಿರುತ್ತಾಳೆ.

27. ಅದೇ ಪ್ರಕಾರ ಫ್ರಾಸಾ.7 ನೊಂದ ಬಾಲಕಿ ನ್ಯಾಯಾಧೀಶರ ಮುಂದೆ ನಿ.ಪಿ.8 ರಂತೆ ಹೇಳಿಕೆ ಕೊಟ್ಟಿದ್ದು, ಸದರಿ ಹೇಳಿಕೆಯಲ್ಲಿ ನನ್ನ ಸೋದರ ಮಾವ ಯಮನೂರ ಹಾಗೂ ಮತ್ತೊಬ್ಬ ಮಾವ ಮಂಜುನಾಥ ಇವರು ಹೊಳೆನಾಗಲಾಪೂರ ಗ್ರಾಮಕ್ಕೆ ಕರೆದುಕೊಂಡು ಹೋದರು ಆ ರೀತಿ 1 ತಿಂಗಳ ಹಿಂದೆ ಕರೆದುಕೊಂಡು ಹೋಗಿದ್ದರು. ಅವರು ಹೊಳೆನಾಗಲಾಪೂರದಲ್ಲಿ ಮಂಜುಳಾ (1 ನೇ ಆರೋಪಿ) ಎಂಬುವಳನ್ನು ಪರಿಚಯ ಮಾಡಿ ಅವರ ಮನೆಗೆ ಬಿಟ್ಟರು. ಸದರಿ ಮಂಜುಳಾರವರು ಪ್ರಭು ಪವಾರ ರವರ ಮನೆಗೆ ಹೊಳೆನಾಗಲಾಪೂರದಲ್ಲಿ ಬಿಟ್ಟರು. ಸದರಿ ಪ್ರಭು ಪವಾರರವರ ಮನೆಯಲ್ಲಿ ನಾನು 4 ದಿವಸ ಇದ್ದೆ, 4 ದಿವಸಗಳ ನಂತರ ಮಂಜುಳಾ ನನ್ನನ್ನು ರಾಜಸ್ಥಾನಕ್ಕೆ ಕರೆದುಕೊಂಡು ಹೋಗಿ 8 ದಿವಸಗಳ ಕಾಲ ಒಬ್ಬ ಏಜೆಂಟನ ಮನೆಯಲ್ಲಿ ಇರಿಸಿದ್ದರು. 8 ದಿವಸಗಳ ನಂತರ ಸದರಿ ಏಜೆಂಟನು ಇಬ್ಬರು ರಾಜಸ್ಥಾನ ಹುಡುಗರನ್ನು ನನ್ನನ್ನು ಮದುವೆ ಮಾಡಿಕೊಳ್ಳುವ ಉದ್ದೇಶದಿಂದ ಕರೆಸಿದ್ದರು ಆ ಹುಡುಗರು ನನಗೆ ಇಷ್ಟ ಆಗಲಿಲ್ಲ. ಆದ್ದರಿಂದ ಮಂಜುಳಾ ಹಾಗೂ ನನ್ನ ಮಾವಂದಿರಾದ ಯಮನೂರ ಹಾಗೂ ಮಂಜುನಾಥರವರೊಡನೆ ವಾಪಸ್ಸು ಹೊಳೆನಾಗಲಾಪೂರಕ್ಕೆ 8 ದಿವಸಗಳ ಹಿಂದೆ ರಾಜಸ್ಥಾನದಿಂದ ಬಂದಿರುತ್ತೇವೆ.

<u>ನಂತರ ಮಂಜುಳಾ ನನ್ನನ್ನು ಮಂತ್ರಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದಳು.</u> ಆಗ ಹೊಳೆನಾಗಲಾಪೂರಕ್ಕೆ ಪೊಲೀಸರು ಬಂದು ಮಂಜುಳಾ ಮನೆಯಲ್ಲಿದ್ದ ಗೌಡಪ್ಪ, ಸಂದೀಪ, ಪೂಜಾ, ಮಂಜುಳಾ ಇವರನ್ನು ಪೊಲೀಸರು ಹಿಡಿದುಕೊಂಡರು ನಮ್ಮನ್ನು ಕಿತ್ತೂರು ಪೊಲೀಸ್ ಠಾಣೆಗೆ ಪೊಲೀಸರು ಕರೆದುಕೊಂಡು ಬಂದರು ಅಂತಾ ನುಡಿದಿರುತ್ತಾಳೆ.

28. ಈ ಅಂಶವನ್ನು ಪರಿಶೀಲಿಸಲಾಗಿ ಈ ನೊಂದ ಬಾಲಕಿಯನ್ನು 1 ನೇ ಆರೋಪಿಗೆ ಪರಿಚಯ ಮಾಡಿ 1 ತಿಂಗಳ ಹಿಂದೆ ಕರೆದುಕೊಂಡು ಹೋಗಿದ್ದು, 4 ದಿವಸ ಮನೆಯಲ್ಲಿ ಇಟ್ಟುಕೊಂಡು ನಂತರ ರಾಜಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ 8 ದಿವಸ ಒಬ್ಬ ಏಜೆಂಟನ ಮನೆಯಲ್ಲಿರಿಸಿದ್ದು, ಮದುವೆ ಮಾಡಿಕೊಳ್ಳುವ ಉದ್ದೇಶದಿಂದ ಕರೆಯಿಸಿದ್ದ ಹುಡುಗರು ಇಷ್ಟವಾಗಿಲ್ಲದೆ ಇದ್ದುದರಿಂದ ಪುನಃ ವಾಪಸ್ಸು ಕರೆದುಕೊಂಡು ಬಂದು ಅಕ್ರಮ ಬಂಧನದಲ್ಲಿಟ್ಟಿದ್ದರ ಬಗ್ಗೆ ಹೇಳಿಕೆ ಕೊಟ್ಟಿರುತ್ತಾರೆ ಸದರಿ ನೊಂದ ಬಾಲಕಿಯರು ನ್ಯಾಯಾಧೀಶರ ಮುಂದೆ ಕೊಟ್ಟಂತಹ ಸ್ವಇಚ್ಛಾ ಹೇಳಿಕೆಗಳನ್ನು ಪರಿಶೀಲಿಸಲಾಗಿ ಸದರಿ ನೊಂದ ಬಾಲಕಿಯರು ಆರೋಪಿತರ ಮೇಲೆ ಉದ್ದೇಶಪೂರ್ವಕವಾಗಿ ಸಾಕ್ಷಿ ನುಡಿಯಬೇಕೆಂಬ ಇರಾದೆ ಇರುವುದಿಲ್ಲ. ಆರೋಪಿ 1 ರಿಂದ 3 ರವರ ಮೇಲೆ ನೊಂದ ಬಾಲಕಿಯರಿಗೆ ಯಾವುದೇ ರೀತಿಯ ದ್ವೇಷ, ಅಸುಹೆ, ಸಂಬಂಧ ಇರುವುದಿಲ್ಲ. ಸದರಿ ಆರೋಪಿ 1 ರಿಂದ 3 ಇವರು ನೊಂದ ಬಾಲಕಿಯರಿಗೆ ಸುಳ್ಳು ಹೇಳಿ, ಆಶ್ವಾಸನೆ ತೋರಿಸಿ ರಾಜಸ್ಥಾನಕ್ಕೆ ಕರೆದುಕೊಂಡು ಹೋಗಿ ಮಾರಾಟ ಮಾಡುವ ಉದ್ದೇಶವನ್ನು ಹೊಂದಿದ್ದರು ಅಂತಾ ಸದರಿ ಹೇಳಿಕೆಗಳಿಂದ ಕಂಡುಬಂದಿರುತ್ತದೆ. ಇಂತಹ ಸಂದರ್ಭದಲ್ಲಿ ಸದರಿ ನೊಂದ ಬಾಲಕಿಯರು ಪ್ರತಿಕೂಲ ಸಾಕ್ಷಿ

ನುಡಿದಿದ್ದರೂ ಸಹಿತ ನ್ಯಾಯಾಧೀಶರ ಮುಂದೆ ಕೊಟ್ಟಂತಹ ಹೇಳಿಕೆಗಳನ್ನು ನ್ಯಾಯಾಲಯವು ಪರಿಗಣಿಸಲು ಬರುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಗುಹಾಟಿ ಉಚ್ಚ ನ್ಯಾಯಾಲಯ (ದ್ವಿಸದಸ್ಯ ಪೀಠ) 2012 ಕ್ರಿ.ಲಾ.ಜ. 4461 ಸುನೀಲ ಘೋರೆ ಅಃ ಸುನೀಲ ಘೋರಾ ವಿರುದ್ಧ ಆಸ್ಸಾಂ ರಾಜ್ಯ (ಎ) ಈ ತೀರ್ಪನ್ನು ಪರಿಶೀಲಿಸಲಾಗಿ ನೊಂದ ಬಾಲಕಿಯರು ಮ್ಯಾಜಿಸ್ಟ್ರೇಟ್ ರವರ ಮುಂದೆ ದಂ.ಪ್ರ.ಸಂ.ಕಲಂ 164 ರಡಿಯಲ್ಲಿ ನುಡಿದಂತಹ ಹೇಳಿಕೆ ಸ್ವಇಚ್ಛೆಯಿಂದ ಕೊಟ್ಟಿದ್ದು ಯಾವುದೇ ಒತ್ತಡ, ಬೆದರಿಕೆ, ವಚನದಿಂದ ಕೊಡಿಲ್ಲದೆ ಇದ್ದಾಗ ಅಂತಹ ಸಂದರ್ಭದಲ್ಲಿ ಸದರಿ ಹೇಳಿಕೆ ಆಧಾರದ ಮೇಲೆ ಶಿಕ್ಷೆ ವಿಧಿಸಿದ್ದರ ಬಗ್ಗೆ ತೀರ್ಪಿನಲ್ಲಿ ತಿಳಿಸಿರುತ್ತಾರೆ. ಹಾಗೂ ಮ್ಯಾಜಿಸ್ಟ್ರೇಟ್ ಮುಂದಿನ ಹೇಳಿಕೆ ಬಹಳ ಮಹತ್ವ ಮತ್ತು ತೂಕದಿಂದ ಕೂಡಿದ್ದು ಇರುತ್ತದೆ. ಆದ್ದರಿಂದ ಸದರಿ ಹೇಳಿಕೆಯ ಆಧಾರದ ಮೇಲೆ ಶಿಕ್ಷೆ ವಿಧಿಸಿದ್ದರ ಬಗ್ಗೆ ತೀರ್ಪಿನಲ್ಲಿ ತಿಳಿಸಿರುತ್ತಾರೆ. ಸದರಿ ಮ್ಯಾಜಿಸ್ಟ್ರೇಟ್ ರವರ ಮುಂದೆ ಕೊಟ್ಟಂತಹ ಹೇಳಿಕೆಯನ್ನು ನ್ಯಾಯಾಲಯವು ಕೂಲಂಕುಶವಾಗಿ ಪರಿಶೀಲಿಸಬೇಕು ಸದರಿ ಹೇಳಿಕೆ ಯಾವುದೇ ಒತ್ತಡ, ಪ್ರಭಾವ ಇಲ್ಲದೆ ಇದ್ದಾಗ ಸ್ವಇಚ್ಛೆಯಿಂದ ಕೊಟ್ಟಂತಹ ಹೇಳಿಕೆಯನ್ನು ನೈಜ ಹೇಳಿಕೆ ಅಂತಾ ಪರಿಗಣಿಸಬೇಕಾಗುತ್ತದೆ. ಸದರಿ ಮ್ಯಾಜಿಸ್ಟ್ರೇಟರವರ ಮುಂದೆ ಕೊಟ್ಟಂತಹ ಹೇಳಿಕೆಗಳನ್ನು ಪರಿಶೀಲಿಸಲಾಗಿ ನೊಂದ ಬಾಲಕಿಯರು ಪ್ರತಿಕೂಲ ಸಾಕ್ಷಿ ನುಡಿದಿದ್ದರೂ ಸಹಿತ ಆರೋಪಿಗಳ ಪರ ವಕೀಲರು ನಿ.ಪಿ.8 ಮತ್ತು 25 ಮ್ಯಾಜಿಸ್ಟ್ರೇಟ್ ರವರ ಮುಂದೆ ಕೊಟ್ಟಂತಹ ಹೇಳಿಕೆಗಳ ಬಗ್ಗೆ ಪಾಟೀ ಸವಾಲು ಮಾಡಿರುವುದಿಲ್ಲ. ಸದರಿ ಹೇಳಿಕೆ ನೊಂದ ಬಾಲಕಿಯರು ಪೊಲೀಸರ ಒತ್ತಡದಿಂದಾಗಲಿ ಅಥವಾ ಬೇರೆ ಯಾರೇ ಒತ್ತಡದಿಂದ ಹೇಳಿರುವುದಿಲ್ಲ. ಆರೋಪಿ 1 ರಿಂದ 3 ರವರು ನೊಂದ ಬಾಲಕಿಯರಿಗೆ ಯಾವ ರೀತಿ ಆಶ್ವಾಸನೆ ಕೊಟ್ಟು

ಕರೆದುಕೊಂಡು ಹೋಗಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದರಿಂದ ಸದರಿ ಹೇಳಿಕೆಗಳ ಆಧಾರದ ಮೇಲಿಂದ ಆರೋಪಿತರು ಅಪರಾಧ ಮಾಡಿರುತ್ತಾರೆ ಅಂತಾ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಆದ್ದರಿಂದ ನೊಂದ ಬಾಲಕಿಯರು ಮ್ಯಾಜಿಸ್ಟ್ರೇಟ್ ರವರ ಮುಂದೆ ಕೊಟ್ಟಂತಹ ಹೇಳಿಕೆಗಳ ಆಧಾರದ ಮೇಲೆ ಆರೋಪಿ 1 ರಿಂದ 3 ರವರು ಅಪರಾಧ ಮಾಡಿರುತ್ತಾರೆ ಅಂತಾ ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

29. ನಿ.ಪಿ.6 ಸ್ಥಳ ಮಹಜರ್ ಬಗ್ಗೆ:- ಆರೋಪಿಗಳ ಪರ ವಕೀಲರು ವಾದ ಮಾಡುತ್ತಾ ನಿ.ಪಿ.6 ಮಹಜರನ್ನು ಗುಜರಾತಿನಲ್ಲಿ ಚಾಸಾ.18/ಪ್ರಾಸಾ.24 ರವರ ಮನೆಯಲ್ಲಿ ಮಾಡಿದಂತಹ ಮಹಜರ್ ಆಗಿದ್ದು, ಇದಕ್ಕೆ ಸಂಬಂಧಿಸಿದಂತೆ ಚಾಸಾ.4, 5 ಮಹಜರ್ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಸದರಿ ಮಹಜರ್ ರುಜುವಾತು ಆಗಿರುವುದಿಲ್ಲ ಅಂತಾ ಮಾಡಿದಂತಹ ಮುಖ್ಯ ವಾದವನ್ನು ಪರಿಶೀಲಿಸಲಾಗಿ ಇದಕ್ಕೆ ಸಂಬಂಧಿಸಿದಂತೆ ಸದರಿ ತನಿಖೆಯನ್ನು ಪ್ರಾಸಾ.15 ಡಿ.ಎಸ್.ಪಿ. ರವರು ಮುಂದುವರೆಸಿ ಚಾಸಾ.4, 5 ರವರನ್ನು ಗುಜರಾತಿಗೆ ಕರೆದುಕೊಂಡು ಹೋಗಿ ಅಲ್ಲಿ ಚಾಸಾ.18 ರವರ ಮನೆಯಲ್ಲಿ ಮಹಜರ್ ಮಾಡಿದ್ದು, ಚಾಸಾ.4, 5 ರವರು ಪ್ರತಿಕೂಲ ಸಾಕ್ಷಿ ನುಡಿದಿದ್ದರೂ ಸಹಿತ ಪ್ರಾಸಾ.15 ತನಿಖಾಧಿಕಾರಿಗಳು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಸದರಿ ಚಾಸಾ.18 ರವರ ಮನೆಗೆ ಸಂಬಂಧಿಸಿದಂತೆ ನಿ,ಪಿ.27 ರಿಂದ 31 ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಇದಕ್ಕೆ ಪೂರಕವಾಗಿ ಚಾಸಾ.18/ಪ್ರಾಸಾ.24 ಅಮೃತಲಾಲ ಶಹಾ ಇವರು 1 ನೇ ಆರೋಪಿಯ ಗಂಡನಾಗಿದ್ದು, ಅವರಿಬ್ಬರ ಮಧ್ಯೆ 8 ವರ್ಷಗಳಿಂದ ಸಂಸಾರ ಮಾಡಿರುವುದಿಲ್ಲ ಅಂತಾ ಹೇಳಿದ್ದು, ಆದರೆ ನಿ.ಪಿ.27 ರಿಂದ 31 ದಾಖಲೆಗಳು

ನನ್ನ ಮನೆಗೆ ಸಂಬಂಧಿಸಿದ್ದಾಗಿರುತ್ತವೆ ಅಂತಾ ಮುಖ್ಯ ವಿಚಾರಣೆಯಲ್ಲಿ ಒಪ್ಪಿಕೊಂಡಿರುತ್ತಾರೆ. ಈ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದರೂ ಸಹಿತ ನಿ.ಪಿ.27 ರಿಂದ 31 ದಾಖಲೆಗಳು ತನ್ನ ಮನೆಗೆ ಸಂಬಂಧಿಸಿದ್ದು ಇರುತ್ತವೆ ಅಂತಾ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಗಳು ಗುಜರಾತಿ ಭಾಷೆಯಲ್ಲಿನ ಫೋನ್ ಬಿಲ್ಲುಗಳು, ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಹಾಜರುಪಡಿಸಿದ್ದ, ಅವು ಗುಜರಾತಿ ಭಾಷೆಯಲ್ಲಿದ್ದು, ಇವುಗಳನ್ನು ಫ್ರಾಸಾ.24 ರವರ ಮನೆಯಲ್ಲಿ ಅಮಾನತ್ತುಪಡಿಸಿಕೊಂಡಿರುವುದರಿಂದ ನೊಂದ ಬಾಲಕಿಯನ್ನು ಮೊದಲು ಸದರಿ ಸಾಕ್ಷಿಯ ಮನೆಗೆ ಕರೆದುಕೊಂಡು ಹೋಗಿದ್ದರ ಬಗ್ಗೆ ರುಜುವಾತು ಆಗಿರುತ್ತದೆ. ಆದ್ದರಿಂದ ನಿ.ಪಿ.6 ಮಹಜರ್ ರುಜುವಾತು ಆಗಿರುವುದಿಲ್ಲ ಅಂತಾ ಆರೋಪಿಗಳ ಪರ ವಕೀಲರ ವಾದ ನ್ಯಾಯಸಮ್ಮತವಾಗಿರುವುದಿಲ್ಲ.

30. ತನಿಖಾಧಿಕಾರಿಯವರು ಪಾಟೀ ಸವಾಲಿನಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳು ಇದ್ದ ಬಗ್ಗೆಃ-

ಆರೋಪಿಗಳ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಿದರೂ ಸಹಿತ ಘಟನೆ 2015 ನೇ ಇಸ್ವಿಯಲ್ಲಿ ನಡೆದಿದ್ದು, ಸಾಕ್ಷಿದಾರರು 2019 ನೇ ಇಸ್ವಿಯಲ್ಲಿ ವಿಚಾರಣೆ ಆಗಿದ್ದರಿಂದ ಸುಮಾರು 3-4 ವರ್ಷಗಳ ನಂತರ ಸಾಕ್ಷಿ ನುಡಿದಿರುವುದರಿಂದ ಸಮಯ, ಸ್ಥಳ ಹಾಗೂ ಇನ್ನಿತರೆ ಸಣ್ಣ-ಪುಟ್ಟ ಅಂಶಗಳ ಬಗ್ಗೆ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ. ಸಣ್ಣ-ಪುಟ್ಟ ವ್ಯತ್ಯಾಸಗಳಾಗಿವೆ ಅನ್ನುವ ಆಧಾರದ ಮೇಲೆ ಅಭಿಯೋಜನೆಯ ಪ್ರಕರಣ ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತದೆ ಅಂತಾ ನ್ಯಾಯಾಲಯವು ಪರಿಗಣಿಸಲು ಬರಲಾರದು ಎಂಬುದರ ಬಗ್ಗೆ ಮಾನ್ಯ ಸರ್ವೊಚ್ಚ ನ್ಯಾಯಾಲಯವು ಎಐಆರ್ 2014 ಎಸ್.ಸಿ. 394(ಬಿ) ಮಧು ಅಃ

ಮಧುರನಾಥ ಮತ್ತು ಇನ್ನೊಬ್ಬರು ವಿರುದ್ಧ ಕರ್ನಾಟಕ ರಾಜ್ಯ, ಈ ತೀರ್ಪನ್ನು ಪರಿಶೀಲಿಸಲಾಗಿ ಸಾಕ್ಷಿಗಳನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದಾಗ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳು ಆಗಿದ್ದು, ಇಂತಹ ಸಂದರ್ಭದಲ್ಲಿ ಸಾಕ್ಷಿದಾರರ ಸಂಪೂರ್ಣ ಸಾಕ್ಷ್ಯವನ್ನು ನ್ಯಾಯಾಲಯವು ಪರಿಗಣಿಸಬೇಕಾಗುತ್ತದೆ. ಸಣ್ಣ-ಪುಟ್ಟ ವ್ಯತ್ಯಾಸಗಳು ಇವೆ ಅನ್ನುವ ಆಧಾರದ ಮೇಲಿಂದ ಅಭಿಯೋಜಕ ಸಾಕ್ಷ್ಯವನ್ನು ತಿರಸ್ಕರಿಸಲು ಬರಲಾರದು ಎಂಬುದರ ಬಗ್ಗೆ ಸ್ಪಷ್ಟವಾದ ತೀರ್ಪು ಇರುತ್ತದೆ. ಈ ತೀರ್ಪಿನ ಪ್ರಕಾರವು ಸಹಿತ ಆರೋಪಿಗಳ ಪರ ವಕೀಲರ ಪಾಟೀ ಸವಾಲನ್ನು ಪರಿಶೀಲಿಸಲಾಗಿ ಸಮಯ, ಸ್ಥಳ ಇನ್ನಿತರ ಸಣ್ಣ-ಪುಟ್ಟ ವ್ಯತ್ಯಾಸಗಳು ಆಗಿರುತ್ತವೆ ಆ ಕಾರಣದಿಂದ ಆರೋಪಿತರು ಅಪರಾಧ ಮಾಡಿರುವುದಿಲ್ಲ ಅಂತಾ ನ್ಯಾಯಾಲಯವು ಪರಿಗಣಿಸಲು ಬರಲಾರದು.

31. ತನಿಖೆಯಲ್ಲಿ ಸಣ್ಣ-ಪುಟ್ಟ ಲೋಪದೋಷಗಳಿದ್ದಾಗಃ

ತನಿಖಾಧಿಕಾರಿಯವರು ತನಿಖೆ ಮಾಡುವಾಗ ಕೆಲವೊಂದು ಅಂಶಗಳನ್ನು ಪರಿಗಣಿಸದೆ ಇದ್ದಾಗ ಹಾಗೂ ಕೆಲವು ಸಾಕ್ಷಿಗಳನ್ನು ತೆಗೆದುಕೊಳ್ಳದೆ ಇದ್ದಾಗ ಅಥವಾ ದಾಖಲೆಗಳನ್ನು ಹಾಜರುಪಡಿಸದೆ ಇದ್ದಾಗ ಹಾಗೂ ಹಾಜರುಪಡಿಸಿದಂತಹ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸದೆ ಇದ್ದಾಗ ಕೆಲವು ವಿಷಯಗಳು ನೆನಪಿಲ್ಲದೆ ಇದ್ದಾಗ, ನೇರವಾದ ಸಾಕ್ಷಿ ಇಲ್ಲದೆ ಇದ್ದಾಗ ಸಾಂದರ್ಬಿಕ ಸಾಕ್ಷಿ ಹಾಗೂ ಇನ್ನಿತರ ಸಾಕ್ಷಿಗಳನ್ನು ಕೂಲಂಕುಶವಾಗಿ ಪರಿಶೀಲಿಸಬೇಕಾಗುತ್ತದೆ ಅಂತಾ ಮಾನ್ಯ ಸರ್ವೋಚ್ಚ ನ್ಯಾಯಾಲಯವು 2014(4) ಕ್ರೈಮ್ಸ್ 418 ಎಸ್.ಸಿ. ಕರ್ನಾಟಕ ರಾಜ್ಯ ವಿರುದ್ಧ ಸುರ್ವಣ್ಣಮ್ಮ ತೀರ್ಪಿನಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಈ ಪ್ರಕರಣದಲ್ಲಿ ನುಡಿದಂತಹ ಸಾಕ್ಷಿದಾರರು ಪೊಲೀಸರು ಅಧಿಕಾರಿಗಳಾಗಿದ್ದರೂ ಸಹಿತ ಹಾಗೂ ಚಾಸಾ.8,

9 ಪೊಲೀಸೇತರ ಸಂಸ್ಥೆಯ ಅಧಿಕಾರಿಗಳಾಗಿದ್ದು, ಫೋಟೋಗ್ರಾಫರ್ ಮತ್ತು ನೊಂದ ಬಾಲಕಿಯರು ಮಾಜಿಸ್ಟ್ರೇಟರವರ ಮುಂದೆ ಕೊಟ್ಟಂತಹ ಹೇಳಿಕೆಗಳನ್ನು ಹಾಗೂ ಹಾಜರುಪಡಿಸಿದಂತಹ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಆರೋಪಿ-1 ರಿಂದ 3 ರವರಿಗೆ ನೊಂದ ಬಾಲಕಿಯರು ಅಪ್ರಾಪ್ತ ವಯಸ್ಕರು ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರಂತಾ ಗೊತ್ತಿದ್ದರೂ ಸಹಿತ ಅವರನ್ನು ಪುಸಲಾಯಿಸಿ ನಂಬಿಸಿ ಅಪಹರಿಸಿಕೊಂಡು ಹೋಗಿ ಅವರ ಇಚ್ಛೆಗೆ ವಿರುದ್ಧವಾಗಿ ಅಕ್ರಮ ಬಂಧನದಲ್ಲಿಟ್ಟು ಗುಜರಾತಿಗೆ ಮಾರಾಟ ಮಾಡುವ ಅಥವಾ ವೇಶ್ಯಾವಾಟಿಕೆಯಲ್ಲಿ ತೊಡಗಿಸುವ ಪ್ರಯತ್ನದಲ್ಲಿದ್ದರು ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತದೆ.

32. <u>ಪೂರ್ವಭಾವನೆಃ</u>- ನೊಂದ ಬಾಲಕಿಯರು ಬೇರೆ ಬೇರೆ ಊರಿನವರಾಗಿದ್ದು, ಆರೋಪಿ-1 ರಿಂದ 3 ರವರಿಗೆ ಸಂಬಂಧಿಕರು ಆಗಿರುವುದಿಲ್ಲ, ಪರಿಚಯಸ್ಥರು ಸಹ ಆಗಿರುವುದಿಲ್ಲ, ಒಂದೇ ಜನಾಂಗದವರು ಆಗಿರುವುದಿಲ್ಲ, ಆರೋಪಿತರ ಮಕ್ಕಳಿಗೆ ಪರಿಚಯ ಇದ್ದವರು ಆಗಿರುವುದಿಲ್ಲ. ಹಾಗಾದರೆ ಸದರಿ ಆರೋಪಿತರ ಮನೆಗೆ ನೊಂದ ಬಾಲಕಿಯರು ಯಾವ ಕಾರಣಕೋಸ್ಕರವಾಗಿ ಬಂದಿರುತ್ತಾರೆ ಎಂಬುದರ ಬಗ್ಗೆ ದಂ.ಪ್ರ.ಸಂ.ಕಲಂ 313 ಹೇಳಿಕೆಯಲ್ಲಿ ಹೇಳಿರುವುದಿಲ್ಲ ಮತ್ತು ಆರೋಪಿತರು ತಮ್ಮ ಪರವಾಗಿ ಸಾಕ್ಷಿ ಮಾಡಿಸಿರುವುದಿಲ್ಲ. ಆದ್ದರಿಂದ ಆರೋಪಿ-1 ರಿಂದ 3 ಇವರು ಸದರಿ ನೊಂದ ಬಾಲಕಿಯರನ್ನು ಅಪಹರಿಸಿಕೊಂಡು ಬಂದು ಅಕ್ರಮ ಬಂಧನದಲ್ಲಿಟ್ಟು ವೇಶ್ಯಾವಾಟಿಕೆ ಮಾಡಿಸುವ ಉದ್ದೇಶದಿಂದ ಗುಜರಾತಿಗೆ ನೊಂದ ಬಾಲಕಿಯರ ಇಚ್ಛೆಗೆ ವಿರುದ್ಧವಾಗಿ ಮಾರಾಟ ಮಾಡುವ ಉದ್ದೇಶವನ್ನು ಹೊಂದಿರುತ್ತಾರೆ ಅಂತಾ ನ್ಯಾಯಾಲಯವು ಪೂರ್ವಭಾವನೆ ಮಾಡಬೇಕಾಗುತ್ತದೆ.

33. ಆರೋಪಿ-4 ಮತ್ತು 5 ಇವರ ಬಗ್ಗೆಃ- ಪ್ರಾಸಾ.15 ಡಿ.ಎಸ್.ಪಿ. ಇವರು ತನಿಖೆ ಮುಂದುವರೆಸಿದಾಗ ಆರೋಪಿ-4, 5 ಇವರನ್ನು ದಸ್ತಗಿರಿ ಮಾಡಿ ಹಾಜರುಪಡಿಸಿದಾಗ ಸದರಿಯವರನ್ನು ವಿಚಾರ ಮಾಡಿ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಆರೋಪಿ-1 ರಿಂದ 3 ರವರು ಹೇಳಿದ ಆಧಾರದ ಮೇಲಿಂದ ಸದರಿ ಆರೋಪಿತರನ್ನು ದಸ್ತಗಿರಿ ಮಾಡಿರುತ್ತಾರೆಯೇ ವಿನಃ ಈ ಪ್ರಕರಣದಲ್ಲಿ ಆರೋಪಿ-4, 5 ರವರು ಭಾಗಿಯಾಗಿದ್ದರ ಬಗ್ಗೆ ಮೇಲ್ನೋಟಕ್ಕೆ ಕಂಡುಬರುವುದಿಲ್ಲ.

34. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಕಾರಣಗಳಿಂದ ಆರೋಪಿ 1 ರಿಂದ 3 ರವರು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದ ಪ್ರಕಾರ ಅಪರಾಧ ಮಾಡಿರುತ್ತಾರೆ ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿದ್ದರಿಂದ ಅಂಶ 1 ರಿಂದ 4 ಅನ್ನು ಆರೋಪಿ 1 ರಿಂದ 3 ರವರಿಗೆ ಸಕಾರಾತ್ಮಕವಾಗಿ ಮತ್ತು ಆರೋಪಿ-4, 5 ರವರಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

35. ಅಂಶ ಸಂಖ್ಯೆ 5ಃ- ಅಂಶ ಸಂಖ್ಯೆ 1 ರಿಂದ 4 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 235(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮುಖಾಂತರ ಆರೋಪಿ-4, 5 ರವರ ವಿರುದ್ಧ ಆರೋಪಣೆ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ 143, 147, 366 ಎ, 344, 370 ಸಹಕಲಂ 149 ಮತ್ತು

ಎಸ್.ಸಿ./ಎಸ್.ಟಿ ಕಾನೂನು 1989 ಕಲಂ 3(i)(XII)(2)(v) ರಡಿಯಲ್ಲಿನ ಅಪರಾಧದಿಂದ ದೋಷಮುಕ್ತಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 235(2) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮುಖಾಂತರ ಆರೋಪಿ 1 ರಿಂದ 3 ರವರ ವಿರುದ್ಧ ಆರೋಪಣೆ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ 143, 147, 366 ಎ, 344, 370 ಸಹಕಲಂ 149 ಮತ್ತು ಎಸ್.ಸಿ./ಎಸ್.ಟಿ ಕಾನೂನು 1989 ಕಲಂ 3(i)(XII)(2)(v) ರಡಿಯಲ್ಲಿನ ಅಪರಾಧವು ರುಜುವಾತಾಗಿರುತ್ತದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ಕಾನೂನಿನ ಪ್ರಕಾರ ಆರೋಪಿ4, 5 ರವರು ಹಾಗೂ ಜಾಮೀನುದಾರರು ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆ ಪತ್ರವು 6 ತಿಂಗಳವರೆಗೆ ಅಸ್ತಿತ್ವದಲ್ಲಿರಕ್ಕದ್ದು ನಂತರ ರದ್ದುಪಡಿಸಲಾಗುವುದೆಂದು ಆದೇಶಿಸಲಾಗಿದೆ.

ಆರೋಪಿ1 ರಿಂದ 3 ರವರಿಗೆ ಶಿಕ್ಷೆ ವಿಧಿಸುವುದಕ್ಕಿಂತ ಪೂರ್ವದಲ್ಲಿ ವಾದ ವಿವಾದದ ಬಗ್ಗೆ ಕೇಳಲು ಮಧ್ಯಾಹ್ನ 1.00 ಕ್ಕೆ ಇಡಲಾಗಿದೆ.

(ತೀರ್ಪುಬರಹಗಾರನಿಗೆ ನೇರವಾಗಿ ಗಣಕೀಕೃತ ಪರದೆಯ ಮೇಲೆ ಉಕ್ತಲೇಖನ ನೀಡಿ ಅದನ್ನು ಅವರು ಬೆರಳಚ್ಚು ಮಾಡಿದ ನಂತರ ಪರಿಶೀಲಿಸಿ, ಸೂಕ್ತ ತಿದ್ದುಪಡಿ ಮಾಡಿ ಮುದ್ರಿತ ಪ್ರತಿಯನ್ನು ತೆಗೆದ ನಂತರ ತೀರ್ಪನ್ನು ಇಂದು ದಿನಾಂಕಃ 17ನೇ ಜನವರಿ, 2010 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಸಹಿಯೊಂದಿಗೆ ಘೋಷಿಸಲಾಯಿತು)

**(ಎಂ.ಹೆಚ್. ಅಣ್ಣಯ್ಯನವರ),**
**3ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,**
**ಬೆಳಗಾವಿ.**

## ಶಿಕ್ಷೆ ವಿಧಿಸುವ ಬಗ್ಗೆ ಆದೇಶ

ಆರೋಪಿ-1, 2 ಪರ ವಕೀಲರು ವಾದ ಮಾಡುತ್ತಾ ಸದರಿ ಆರೋಪಿತರು ಬಡವರಿದ್ದು, ಅವರನ್ನೇ ಅವಲಂಭಿತವಾದಂತಹ ಕುಟುಂಬ ಇರುತ್ತದೆ. ನ್ಯಾಯಾಲಯವು ಸದರಿ ಆರೋಪಿತರ ಮೇಲೆ ಕರುಣೆ ತೋರಬೇಕೆಂದು ವಾದ ಮಂಡಿಸಿರುತ್ತಾರೆ.

ಆರೋಪಿ-3 ಪರ ವಕೀಲರು ವಾದ ಮಾಡುತ್ತಾ ಸದರಿ ಆರೋಪಿ ಅವಿವಾಹಿತನಾಗಿದ್ದು, ಆತನನ್ನೇ ಅವಲಂಭಿತವಾದಂತಹ ಕುಟುಂಬ ಇರುತ್ತದೆ. ನ್ಯಾಯಾಲಯವು ಸದರಿ ಆರೋಪಿತನ ಮೇಲೆ ಕರುಣೆ ತೋರಬೇಕೆಂದು ವಾದ ಮಂಡಿಸಿರುತ್ತಾರೆ.

ಸರ್ಕಾರಿ ಅಭಿಯೋಜಕರು ವಾದ ಮಾಡುತ್ತಾ ಸದರಿ ಅಪರಾಧ ಘೋರ ಸ್ವರೂಪದ ಅಪರಾಧವಾಗಿದ್ದು, ಸದರಿ ಕಾನೂನಿನ ಅಡಿಯಲ್ಲಿ ಇರತಕ್ಕಂತಹ ಗರಿಷ್ಟ ಮಟ್ಟದ ಶಿಕ್ಷೆಯನ್ನು ವಿಧಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಉಭಯ ಪಕ್ಷಕಾರರ ಪರ ವಕೀಲರ ವಾದವನ್ನು ಪರಿಶೀಲಿಸಲಾಗಿ ಭಾ.ದಂ.ಸಂ.ಕಲಂ 143 ಕ್ಕೆ ಸಂಬಂಧಪಟ್ಟಂತೆ 6 ತಿಂಗಳ ಸಜೆ ಅಥವಾ ದಂಡ, ಭಾ.ದಂ.ಸಂ.ಕಲಂ 147 ಕ್ಕೆ ಸಂಬಂಧಪಟ್ಟಂತೆ 2 ವರ್ಷ ಸಜೆ ಅಥವಾ ದಂಡ,ಭಾ.ದಂ.ಸಂ.ಕಲಂ 344 ಕ್ಕೆ ಸಂಬಂಧಪಟ್ಟಂತೆ 3 ವರ್ಷ ಸಜೆ ಅಥವಾ ದಂಡ, ಭಾ.ದಂ.ಸಂ.ಕಲಂ 366(ಎ) ಕ್ಕೆ ಸಂಬಂಧಪಟ್ಟಂತೆ ಕನಿಷ್ಟ 10 ವರ್ಷ ಸಜೆ ಮತ್ತು ದಂಡ, ಭಾ.ದಂ.ಸಂ.ಕಲಂ 370(5) ಕ್ಕೆ ಸಂಬಂಧಪಟ್ಟಂತೆ ಕಾನೂನು ಪರಿಶೀಲಿಸಲಾಗಿ ಇಬ್ಬರೂ ಅಲ್ಪವಯಸ್ಕ ಬಾಲಕಿಯರನ್ನು ಅಪಹರಿಸಿಕೊಂಡು ಹೋಗಿ ಮಾರಾಟ ಅಥವಾ ವೇಶ್ಯಾವಾಟಿಕೆಗೆ ತೊಡಗಿಸಿದಲ್ಲಿ ಕನಿಷ್ಟ 14 ವರ್ಷ ಕಠಿಣ ಸಜೆ ಹಾಗೂ ಜೀವಾವಧಿ ಸಜೆ

ಮತ್ತು ದಂಡ ವಿಧಿಸತಕ್ಕದ್ದು ಅಂತಾ ಕಾನೂನು ಇರುತ್ತದೆ. ಸದರಿ ಕಾನೂನಿನ ಪ್ರಕಾರ ಈ ಕೇಸಿನಲ್ಲಿ ಫ್ರಾಸಾ.3 ಮತ್ತು 7 ನೊಂದ ಬಾಲಕಿಯರಿದ್ದು, ಇವರಲ್ಲಿ ಫ್ರಾಸಾ.7 ಇವಳು 13 ವರ್ಷ 8 ತಿಂಗಳ ಅಲ್ಪ ವಯಸ್ಕ ಬಾಲಕಿಯಾಗಿರುತ್ತಾಳೆ. ಫ್ರಾಸಾ.3 ವಯಸ್ಕಳಾಗಿರುತ್ತಾಳೆ. ಆದ್ದರಿಂದ ಭಾ.ದಂ.ಸಂ.ಕಲಂ 370(4) ರ ಪ್ರಕಾರ ನೊಂದ ಅಲ್ಪವಯಸ್ಕ ಬಾಲಕಿಯನ್ನು ಅಪಹರಿಸಿಕೊಂಡು ಹೋಗಿ ಮಾರಾಟ ಅಥವಾ ವೇಶ್ಯಾವಾಟಿಕೆಗೆ ತೊಡಗಿಸಿದಲ್ಲಿ ಕನಿಷ್ಟ 10 ವರ್ಷ ಕಠಿಣ ಸಜೆ ಹಾಗೂ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸತಕ್ಕಂತಹ ಕಾನೂನು ಇರುತ್ತದೆ. ಆದ್ದರಿಂದ ಈ ಕೇಸಿಗೆ ಭಾ.ದಂ.ಸಂ.ಕಲಂ 370(4) ಅನ್ವಯವಾಗುತ್ತದೆ.

ಎಸ್.ಸಿ/ಎಸ್.ಟಿ. ಕಾನೂನು ಕಲಂ 3(i)(xi) ಇದಕ್ಕೆ 6 ತಿಂಗಳಿಗಿಂತ ಕಡಿಮೆ ಇಲ್ಲದೆ 5 ವರ್ಷದವರೆಗೆ ವಿಸ್ತರಿಸಬಹುದಾದ ಶಿಕ್ಷೆ ಮತ್ತು ದಂಡ ವಿಧಿಸತಕ್ಕಂತಹ ಕಾನೂನು ಇರುತ್ತದೆ.

ಎಸ್.ಸಿ/ಎಸ್.ಟಿ. ಕಾನೂನು ಕಲಂ 3(2)(v) ಇದಕ್ಕೆ 10 ವರ್ಷದವರೆಗೆ ಅಥವಾ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸತಕ್ಕಂತಹ ಕಾನೂನು ಇರುತ್ತದೆ.

ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ ಫ್ರಾಸಾ.3 ಮತ್ತು 7 ಅಲ್ಪವಯಸ್ಕ ಹಾಗೂ ಪರಿಶಿಷ್ಟ ಜಾತಿಯ ಬಾಲಕಿಯರಾಗಿದ್ದು, ಸದರಿ ಬಾಲಕಿಯರು ಮುಗ್ದ ಸ್ವಭಾವದವರಿರುತ್ತಾರೆ. ಹಾಗೂ ಮಕ್ಕಳ ಬಗ್ಗೆ ನ್ಯಾಯಾಲಯವು ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಮಕ್ಕಳು ದೇಶದ ಆಸ್ತಿ, ಇಂದಿನ ಮಕ್ಕಳೆ ದೇಶದ ನಾಗರೀಕರು, ಮಕ್ಕಳ ಮೇಲೆ ನಡೆದ ದೌರ್ಜನ್ಯ, ಅತ್ಯಾಚಾರ ಅಥವಾ ವೇಶ್ಯಾವಾಟಿಕೆ ಇದು ಸಮಾಜದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಮಗುವಿನ ಹಕ್ಕು ನಷ್ಟವಾಗುತ್ತದೆ.

ಬಡವರು ಆರ್ಥಿಕವಾಗಿ ದುರ್ಬಲರಾಗಿದ್ದಾಗ ಪರಿಶಿಷ್ಟ ಜಾತಿ ಅಥವಾ ಪಂಗಡದ ಕುಟುಂಬದವರಿಗೆ ಆಶೆ-ಆಮಿಷವನ್ನು ತೋರಿಸಿ ಮಕ್ಕಳನ್ನು ಅಪಹರಿಸಿ ರಾಜ್ಯದಿಂದ ಬೇರೆ ರಾಜ್ಯಕ್ಕೆ ಮಾರಾಟ ಮಾಡಿ ವೇಶ್ಯಾವಾಟಿಕೆಗೆ ತೊಡಗಿಸತಕ್ಕಂತಹ ಅಪರಾಧ ಘೋರ ಸ್ವರೂಪದ ಅಪರಾಧವಾಗಿರುತ್ತದೆ. ಇಂತಹ ಅಪರಾಧ ಮಾಡಿದವರ ಮೇಲೆ ನ್ಯಾಯಾಲಯವು ಕರುಣೆ ತೋರುವುದಕ್ಕಿಂತ ಪೂರ್ವದಲ್ಲಿ ಕಠಿಣವಾದ, ಗರಿಷ್ಟ ಮೊತ್ತದ ಶಿಕ್ಷೆ ವಿಧಿಸುವುದು ಸೂಕ್ತ ಅಂತಾ ನ್ಯಾಯಾಲಯಕ್ಕೆ ಕಂಡುಬಂದಿದ್ದರಿಂದ ಈ ಕೆಳಗಿನಂತೆ ಆದೇಶಃ

## ಆದೇಶ

ಆರೋಪಿ-1 ರಿಂದ 3 ರವರಿಗೆ ಭಾ.ದಂ.ಸಂ.ಕಲಂ 143 ರಡಿಯಲ್ಲಿ ತಲಾ ರೂ.2,000/- ದಂಡ ವಿಧಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 1 ತಿಂಗಳ ಸಾಧಾ ಸಜೆ ಅನುಭವಿಸತಕ್ಕದ್ದು.

ಆರೋಪಿ-1 ರಿಂದ 3 ರವರಿಗೆ ಭಾ.ದಂ.ಸಂ.ಕಲಂ 147 ರಡಿಯಲ್ಲಿ ತಲಾ ರೂ.5,000/- ದಂಡ ವಿಧಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 1 ತಿಂಗಳ ಸಾಧಾ ಸಜೆ ಅನುಭವಿಸತಕ್ಕದ್ದು.

ಆರೋಪಿ-1 ರಿಂದ 3 ರವರಿಗೆ ಭಾ.ದಂ.ಸಂ.ಕಲಂ 344 ರಡಿಯಲ್ಲಿ ತಲಾ 1 ವರ್ಷ ಸಾಧಾ ಸಜೆ ವಿಧಿಸಲಾಗಿದೆ ಮತ್ತು ತಲಾ ರೂ.5,000/- ದಂಡ ಕಟ್ಟಲು ಆದೇಶಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 3 ತಿಂಗಳ ಸಾಧಾ ಸಜೆ ಅನುಭವಿಸತಕ್ಕದ್ದು.

ಆರೋಪಿ-1 ರಿಂದ 3 ರವರಿಗೆ ಭಾ.ದಂ.ಸಂ.ಕಲಂ 366(ಎ) ರಡಿಯಲ್ಲಿ ತಲಾ 10 ವರ್ಷ ಕಠಿಣ ಸಜೆ ವಿಧಿಸಲಾಗಿದೆ ಮತ್ತು ತಲಾ ರೂ.20,000/-

ದಂಡ ಕಟ್ಟಲು ಆದೇಶಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 3 ವರ್ಷ ಕಠಿಣ ಸಜೆ ಅನುಭವಿಸತಕ್ಕದ್ದು.

ಆರೋಪಿ-1 ರಿಂದ 3 ರವರಿಗೆ ಭಾ.ದಂ.ಸಂ.ಕಲಂ 370(4) ರಡಿಯಲ್ಲಿ ಕಠಿಣ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ ಮತ್ತು ತಲಾ ರೂ.20,000/- ದಂಡ ಕಟ್ಟಲು ಆದೇಶಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 3 ವರ್ಷ ಕಠಿಣ ಸಜೆ ಅನುಭವಿಸತಕ್ಕದ್ದು.

ಆರೋಪಿ-1 ರಿಂದ 3 ರವರಿಗೆ ಎಸ್.ಸಿ/ಎಸ್.ಟಿ. ಕಾನೂನು ಕಲಂ 3(1) (xii) ರಡಿಯಲ್ಲಿ 6 ತಿಂಗಳು ಸಾಧಾ ಸಜೆ ವಿಧಿಸಲಾಗಿದೆ ಮತ್ತು ತಲಾ ರೂ.3,000/- ದಂಡ ಕಟ್ಟಲು ಆದೇಶಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 1 ತಿಂಗಳ ಸಾಧಾ ಸಜೆ ಅನುಭವಿಸತಕ್ಕದ್ದು.

ಆರೋಪಿ-1 ರಿಂದ 3 ರವರಿಗೆ ಎಸ್.ಸಿ/ಎಸ್.ಟಿ. ಕಾನೂನು ಕಲಂ 3(2) (v) ರಡಿಯಲ್ಲಿ 10 ವರ್ಷ ಕಠಿಣ ಸಜೆ ವಿಧಿಸಲಾಗಿದೆ ಮತ್ತು ತಲಾ ರೂ.20,000/- ದಂಡ ಕಟ್ಟಲು ಆದೇಶಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಸದರಿ ಆರೋಪಿತರು ಪುನಃ ತಲಾ 3 ವರ್ಷ ಕಠಿಣ ಸಜೆ ಅನುಭವಿಸತಕ್ಕದ್ದು.

ಆರೋಪಿ 1 ರಿಂದ 3 ರವರು ನ್ಯಾಯಾಂಗ ಬಂಧನದಲ್ಲಿರತಕ್ಕಂತಹ ಅವಧಿಯನ್ನು ದಂ.ಪ್ರ.ಸಂ.ಕಲಂ 428 ರಡಿಯಲ್ಲಿ ವಜಾವಟ್ಟು ಮಾಡಲಾಗಿದೆ.

ಈ ಮೇಲ್ಕಂಡ ಶಿಕ್ಷೆಗಳನ್ನು ಏಕಕಾಲಕ್ಕೆ **(shall run concurrently)** ಜಾರಿಗೆ ಬರತಕ್ಕದ್ದು ಅಂತಾ ಆದೇಶಿಸಲಾಗಿದೆ.

ಆರೋಪಿ 1 ರಿಂದ 3 ರವರಿಗೆ ವಿಧಿಸಿದಂತಹ ದಂಡದ ಹಣ ತಲಾ ರೂ.75,000/- (ಒಟ್ಟು ರೂ.2,25,000/-) ರಲ್ಲಿ ನೊಂದ ಬಾಲಕಿಯರಾದ ಪ್ರಾಸಾ.3(ಚಾಸಾ.7) ಮತ್ತು ಪ್ರಾಸಾ.7(ಚಾಸಾ.6) ಇವರಿಗೆ ಮೇಲ್ಮನವಿ ಅವಧಿ ಮುಗಿದ ನಂತರ ತಲಾ ರೂ.1,00,000/- ಹಣವನ್ನು ದಂ.ಪ್ರ.ಕ್ರಿ.ಸಂ.ಕಲಂ 357(ಎ) ಕಾನೂನಿನ ಅಡಿಯಲ್ಲಿ ಪರಿಹಾರ ರೂಪದಲ್ಲಿ ಕೊಡಲು ಆದೇಶಿಸಲಾಯಿತು. ಉಳಿದ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಯಿತು.

ತೀರ್ಪಿನ ಪ್ರತಿಯನ್ನು ಉಚಿತವಾಗಿ ಸದರಿ ಆರೋಪಿತರಿಗೆ ತಕ್ಷಣವೇ ನೀಡಲು ಆದೇಶಿಸಲಾಯಿತು.

ಆರೋಪಿ 1 ರಿಂದ 3 ರವರು ಬರೆದುಕೊಟ್ಟಂತಹ ಮುಚ್ಚಳಿಕೆ ಮತ್ತು ಜಾಮೀನು ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಗಿದೆ

(ತೀರ್ಪುಬರಹಗಾರನಿಗೆ ಉಕ್ತಲೇಖನ ನೀಡಿ ಅದನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಪರಿಶೀಲಿಸಿ, ಸೂಕ್ತ ತಿದ್ದುಪಡಿ ಮಾಡಿ ಮುದ್ರಿತ ಪ್ರತಿಯನ್ನು ತೆಗೆದ ನಂತರ ತೀರ್ಪನ್ನು ಇಂದು ದಿನಾಂಕಃ 20ನೇ ಜನವರಿ 2020 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಸಹಿಯೊಂದಿಗೆ ಘೋಷಿಸಲಾಯಿತು)

(ಎಂ.ಹೆಚ್. ಅಣ್ಣಯ್ಯನವರ),
3ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಬೆಳಗಾವಿ.

## ಅನುಬಂಧ

### 1. ಅಭಿಯೋಜನೆ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ

ಪ್ರಾಸಾ.1 ನಿಂಗನಗೌಡ ಅಣ್ಣೇಶಗೌಡ ಪಾಟೀಲ
ಪ್ರಾಸಾ.2 ಬಾಬು ರುದ್ರಪ್ಪ ಬಾಳನ್ನವರ
ಪ್ರಾಸಾ.3 ನೊಂದ ಬಾಲಕಿ
ಪ್ರಾಸಾ.4 ಶೋಭಾ ವಿಠ್ಠಲಪ್ಪ ಹರಿದೇಮಣ್ಣವರ
ಪ್ರಾಸಾ.5 ವಿಠ್ಠಲ ಸಿದ್ದಪ್ಪ ಬಂಕಿ

ಪ್ರಾಸಾ.6 ಜ್ಯೋತಿಬಾ ಓಮಾನೆ ಇಂಚನಾಳಕರ
ಪ್ರಾಸಾ.7 ನೊಂದ ಬಾಲಕಿ
ಪ್ರಾಸಾ.8 ವಿ. ಸುಶೀಲಾ
ಪ್ರಾಸಾ.9 ಬಸವರಾಜ ಲಕ್ಷ್ಮಣ ದಳವಾಯಿ
ಪ್ರಾಸಾ.10 ಸುರೇಶ ಗುಂಡು ಕಲ್ಯಾಣಪೂರಕರ
ಪ್ರಾಸಾ.11 ಗಂಗವ್ವ ಬಸಪ್ಪ ಕುರಿ
ಪ್ರಾಸಾ.12 ಬಸಪ್ಪ ಜ್ಯೋತೆಪ್ಪ ಕುರಿ
ಪ್ರಾಸಾ.13 ಮಹಾಂತೇಶ ಮಡಿವಾಳಪ್ಪ ಸುಬೇದಾರ
ಪ್ರಾಸಾ.14 ದುಂಡಪ್ಪ ಬಸಪ್ಪ ಈಟಿ
ಪ್ರಾಸಾ.15 ಶೇಖರ ಅರ್ಜುನಪ್ಪ ಅಗಡಿ
ಪ್ರಾಸಾ.16 ಇಸ್ಮಾಯಿಲಸಾಬ ಮುಕ್ತುಮಸಾಬ ನನ್ನೆಖಾನ
ಪ್ರಾಸಾ.17 ಪಾಂಡುರಂಗ ಶಂಕರ ನಾಯ್ಕ
ಪ್ರಾಸಾ.18 ಮಹಾದೇವ ಶಂಕರ ಅಥಣಿ
ಪ್ರಾಸಾ.19 ಗಿರೀಶ ಭೀಮಣ್ಣ ಸ್ವಾಧಿ
ಪ್ರಾಸಾ.20 ಅರುಣ ಮಧುರ ನೀರಗಟ್ಟಿ
ಪ್ರಾಸಾ.21 ಅಭಿದಲಿ ಫಕರುದ್ದೀನಅಲಿ ಕಾರವಾರ
ಪ್ರಾಸಾ.22 ಬಸವರಾಜ ಲಕ್ಷ್ಮಣ ಉಪ್ಪಾರ
ಪ್ರಾಸಾ.23 ಸುಹಾಸ ಶಂಕರ ಇಂಗಳೆ
ಪ್ರಾಸಾ.24 ಅಮೃತಲಾಲ ಸಾಕಳಚಂದ ಶಹಾ

**2. ಆರೋಪಿಗಳ ಪರವಾಗಿ ಮಾಡಿದ ಸಾಕ್ಷಿಗಳ ವಿವರ:**

- ಇಲ್ಲ -

**3. ಅಭಿಯೋಜನೆ ಪರವಾಗಿ ಮಾಡಿದ ದಾಖಲೆಗಳ ವಿವರಃ**

ನಿ.ಪಿ.1 ದಾಳಿ ಪಂಚನಾಮೆ
ನಿ.ಪಿ.1(ಎ) ರಿಂದ 1(ಡಿ) ಸಹಿಗಳು
ನಿ.ಪಿ.2 ಕಚ್ಚಾ ನಕಾಶೆ
ನಿ.ಪಿ.2(ಎ) ಸಹಿ
ನಿ.ಪಿ.3 ಫೋಟೋ
ನಿ.ಪಿ.4 ದೂರು
ನಿ.ಪಿ.4(ಎ) (ಬಿ) ಸಹಿಗಳು
ನಿ.ಪಿ.5 ಪ್ರಾಸಾ.3 ರವರ ಹೇಳಿಕೆ
ನಿ.ಪಿ.6 ಸ್ಥಳ ಪಂಚನಾಮೆ
ನಿ.ಪಿ.6(ಎ) ರಿಂದ 6(ಡಿ) ಸಹಿಗಳು
ನಿ.ಪಿ.7 ಪ್ರಾಸಾ.7 ರವರ ಹೇಳಿಕೆ

ನಿ.ಪಿ.8 ದಂ.ಪ್ರ.ಸಂ.ಕಲಂ 164 ರಡಿಯಲ್ಲಿನ ಹೇಳಿಕೆ
ನಿ.ಪಿ.8(ಎ) ಸಹಿ
ನಿ.ಪಿ.9 ಫ್ರಾಸಾ.9 ರವರ ಹೇಳಿಕೆ
ನಿ.ಪಿ.10 ಫ್ರಾಸಾ.11 ರವರ ಹೇಳಿಕೆ
ನಿ.ಪಿ.11 ಫ್ರಾಸಾ.12 ರವರ ಹೇಳಿಕೆ
ನಿ.ಪಿ.12 ಪ್ರಥಮ ವರ್ತಮಾನ ವರದಿ
ನಿ.ಪಿ.12(ಬಿ) ಸಹಿ
ನಿ.ಪಿ.13 ಆದೇಶ
ನಿ.ಪಿ.13(ಎ) ಸಹಿ
ನಿ.ಪಿ.14 ವರದಿ
ನಿ.ಪಿ.15 ಶಾಲಾ ವರ್ಗಾವಣೆ ಪತ್ರ
ನಿ.ಪಿ.15(ಎ) (ಬಿ) ಸಹಿಗಳು
ನಿ.ಪಿ.16 ರಹವಾಸಿ ಪ್ರಮಾಣ ಪತ್ರ
ನಿ.ಪಿ.16(ಎ) ಸಹಿ
ನಿ.ಪಿ.17 ರಹವಾಸಿ ಪ್ರಮಾಣ ಪತ್ರ
ನಿ.ಪಿ.17(ಎ) ಸಹಿ
ನಿ.ಪಿ.18 ಜಾತಿ ಪ್ರಮಾಣ ಪತ್ರ
ನಿ.ಪಿ.18(ಎ)(ಬಿ) ಸಹಿಗಳು
ನಿ.ಪಿ.19 ಜಾತಿ ಪ್ರಮಾಣ ಪತ್ರ
ನಿ.ಪಿ.19(ಎ) ಸಹಿ
ನಿ.ಪಿ.20 ರಹವಾಸಿ ಪ್ರಮಾಣ ಪತ್ರ
ನಿ.ಪಿ.20(ಎ) ಸಹಿ
ನಿ.ಪಿ.21 ಜಾತಿ ಪ್ರಮಾಣ ಪತ್ರ
ನಿ.ಪಿ.21(ಎ)(ಬಿ) ಸಹಿಗಳು
ನಿ.ಪಿ.22 ರಹವಾಸಿ ಪ್ರಮಾಣ ಪತ್ರ
ನಿ.ಪಿ.22(ಎ) ಸಹಿ
ನಿ.ಪಿ.23 ರಹವಾಸಿ ಪ್ರಮಾಣ ಪತ್ರ
ನಿ.ಪಿ.23(ಎ) ಸಹಿ
ನಿ.ಪಿ.24 ಜಾತಿ ಪ್ರಮಾಣ ಪತ್ರ
ನಿ.ಪಿ.24(ಎ)(ಬಿ) ಸಹಿಗಳು
ನಿ.ಪಿ.25 ದಂ.ಪ್ರ.ಸಂ.ಕಲಂ 164 ರಡಿಯಲ್ಲಿನ ಹೇಳಿಕೆ
ನಿ.ಪಿ.26 ನಕಾಶೆ
ನಿ.ಪಿ.26(ಎ) ಸಹಿ
ನಿ.ಪಿ.27 ರಿಂದ 31, ವಿದ್ಯುತ್ ಬಿಲಗಳು, ಫೋನ ಬಿಲ್ಲುಗಳು, ಬಿಪಿಎಲ್ ಕಾಡ್
ನಿ.ಪಿ.27(ಎ) ರಿಂದ 31(ಎ) ಸಹಿಗಳು

ನಿ.ಪಿ.32 ವರದಿ
ನಿ.ಪಿ.32(ಎ)(ಬಿ) ಸಹಿಗಳು
ನಿ.ಪಿ.33 ಶಾಲಾ ವರ್ಗಾವಣೆ ಪ್ರಮಾಣ ಪತ್ರ
ನಿ.ಪಿ.33(ಎ) ಸಹಿ
ನಿ.ಪಿ.34 ಫ್ರಾಸಾ.24 ರವರ ಹೇಳಿಕೆ

4. ಆರೋಪಿ ಪರವಾಗಿ ಮಾಡಿದ ದಾಖಲೆಗಳ ವಿವರಃ

– ಇಲ್ಲಾ –

5. ಅಭಿಯೋಜನೆ ಪರವಾಗಿ ಗುರುತಿಸಿದ ಮು.ಮಾ.ಗಳ ವಿವರಃ

ಇಲ್ಲಾ

(ಎಂ.ಹೆಚ್. ಅಣ್ಣಯ್ಯನವರ),
3ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಬೆಳಗಾವಿ.